ನಮ್ಮ ಜನ
NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ –02 ಸಂಚಿಕೆ – 241 | ಆರ್‌ಎನ್‌ಐ ನಂ: ಕೆಎಆರ್‌ಕೆಎಎನ್/2023/88462 | ಕೆಎ/ಎಸ್‌ಕೆ/ಸಿಟಿಎ–874/2024–2026 | ಚಿತ್ರದುರ್ಗ | ದಿನಾಂಕ: 17–04–2025 ಗುರುವಾರ | ಪುಟ: 4 | ಬೆಲೆ : ರೂ.2–00
Volume - 02 Issue - 241 | RNI No: KARKAN/2023/88462 | KA/SK/CTA-874/2024-2026 | Chitradurga | Date: 17-04-2025 Thursday | Page: 4 | Price: Rs. 2-00

ಒಳಪುಟದ ಸುದ್ದಿಗಳು
ಮಹಿಳೆಯರ ಮೇಲಿನ ದೌರ್ಜನ್ಯ ತಡೆಗಟ್ಟಲು ಅರಿವು ಕಾರ್ಯಕ್ರಮಗಳು ನಡೆಯಲಿ 2
ಕೋಟೆನಗರಿಯಲ್ಲಿ ಅಕ್ಕ–ತಂಗಿಯರ ಭೇಟಿ 3
ಸಿರಿವಂತನಾಗದಿದ್ದರೂ.. ಸೋಮಾರಿಯಾಗಬೇಡ 4

ಸುದ್ದಿ, ಜಾಹಿರಾತಿಗೆ 9686622252

## ಫಾಸ್ಟ್ ನ್ಯೂಸ್

### ಸಿಇಟಿ ಪರೀಕ್ಷೆ: 279 ವಿದ್ಯಾರ್ಥಿಗಳು ಗೈರು

» **ಚಿತ್ರದುರ್ಗ**

ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಬುಧವಾರ ಎರಡು ವಿಷಯಗಳಿಗೆ ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಇಟಿ) ಸುಗಮವಾಗಿ ಜರುಗಿದ್ದು, ಜಿಲ್ಲೆಯಲ್ಲಿ 279 ವಿದ್ಯಾರ್ಥಿಗಳು ಗೈರಾಗಿದ್ದಾರೆ. ವಿದ್ಯಾರ್ಥಿಗಳು ಬೆಳಿಗ್ಗೆ 10.30 ರಿಂದ 11.50 ರವರೆಗೆ ಭೌತಶಾಸ್ತ್ರ, ಮಧ್ಯಾಹ್ನ 2.30 ರಿಂದ 3.50 ರವರೆಗೆ ರಸಾಯನಶಾಸ್ತ್ರ ವಿಷಯದ ಪರೀಕ್ಷೆ ಬರೆದರು. ಎರಡು ಪರೀಕ್ಷೆಗಳಲ್ಲೂ ನೋಂದಣಿಯಾದ 6745 ವಿದ್ಯಾರ್ಥಿಗಳ ಪೈಕಿ 6466 ವಿದ್ಯಾರ್ಥಿಗಳು ಹಾಜರಾಗಿ, 279 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಚಿತ್ರದುರ್ಗ ನಗರದ 16 ಪರೀಕ್ಷಾ ಕೇಂದ್ರಗಳಲ್ಲಿ ಸಿಇಟಿ ಪರೀಕ್ಷೆ ಯಾವುದೇ ಗೊಂದಲವಿಲ್ಲದೆ ಸುಗಮವಾಗಿ ನಡೆಯಿತು ಎಂದು ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಉಪನಿರ್ದೇಶಕರು ತಿಳಿಸಿದ್ದಾರೆ.

### ವಿದ್ಯುತ್ ವ್ಯತ್ಯಯ

» **ಚಿತ್ರದುರ್ಗ**

66/11 ಕೆ.ವಿ ಹೆಚ್.ಡಿ.ಪುರ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಹಾಲಿ ಅಸ್ತಿತ್ವದಲ್ಲಿರುವ ಕಾರಿಡಾರ್‌ನಲ್ಲಿ ದ್ವಿಮಾರ್ಗ ಟವರ್‌ಗಳಿಂದ ಅಸ್ತಿತ್ವದಲ್ಲಿರುವ ಏಕಮಾರ್ಗ ಟವರ್‌ಗಳನ್ನು ಬದಲಿಸುವ ಮೂಲಕ ಹೆಚ್.ಡಿ ಪುರ ಟ್ಯಾಪ್ ಪಾಯಿಂಟ್‌ನಿಂದ ಹೆಚ್.ಡಿ ಪುರ ವಿವಿ ಕೇಂದ್ರದ ನಡುವೆ 66/11 ಕೆವಿ ಹೆಚ್.ಡಿ ಪುರದಲ್ಲಿ ಲಿಲೋ ವ್ಯವಸ್ಥೆ ಒದಗಿಸಲು ಕೊಯೊಟ್ ಕಂಡಕ್ಟರ್‌ನೊಂದಿಗೆ 9.163 ಕಿಮೀ ದೂರಕ್ಕೆ ಹೆಚ್ಚುವರಿ 66 ಕೆವಿ ಸರ್ಕ್ಯೂಟ್ ಅನ್ನು ಒದಗಿಸಲು 66/11 ಕೆವಿ ಹೆಚ್.ಡಿ ಪುರ ವಿ.ವಿ ಕೇಂದ್ರಕ್ಕೆ ಮಾರ್ಗ ಮುಕ್ತತೆ ನೀಡಬೇಕಾಗಿರುವುದರಿಂದ ಈ ವಿ.ವಿ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಎಲ್ಲಾ 11 ಕೆ.ವಿ ಮಾರ್ಗಗಳಲ್ಲಿ ಇದೇ ಏಪ್ರಿಲ್ 17, 19, 21 ಮತ್ತು 23ರಂದು ಬೆಳಿಗ್ಗೆ 9 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

**ವಿದ್ಯುತ್ ಅಡಚಣೆಯಾಗುವ ಪ್ರದೇಶಗಳು:** ತಾಳ್ಯ ಕಾವಲು, ಉಪ್ಪರಿಗೇನಹಳ್ಳಿ, ಬೂದಿಪುರ, ನಲ್ಲಿಕಟ್ಟೆ, ತಾಳ್ಯ, ಮತ್ತಿಘಟ್ಟ, ಕೆರೆಯಾಗಲಹಳ್ಳಿ, ಚೌಡಗೊಂಡನಹಳ್ಳಿ, ತೇಕಲವಟ್ಟಿ, ತೋಡರನಾಳ್, ಕೋಳಾಳ್, ಬಿ.ಆರ್ ಗುಡಿ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಗ್ರಾಹಕರು ಸಹಕರಿಸಬೇಕು ಎಂದು ಬೆಸ್ಕಾಂ ಕಾರ್ಯನಿರ್ವಾಹಕ ಇಂಜಿನಿಯರ್ ಜಿ.ತಿಮ್ಮರಾಯ ತಿಳಿಸಿದ್ದಾರೆ.

### ನೇರ ನೇಮಕಾತಿ

» **ಚಿತ್ರದುರ್ಗ**

ಚಿತ್ರದುರ್ಗ ನಗರದ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಇದೇ ಏಪ್ರಿಲ್ 19ರಂದು ಬೆಳಿಗ್ಗೆ 10 ರಿಂದ 2 ರವರೆಗೆ ನೇರ ನೇಮಕಾತಿ ಸಂದರ್ಶನ ನಡೆಯಲಿದೆ. ಈ ಮೇಳದಲ್ಲಿ 03ಕ್ಕೂ ಹೆಚ್ಚಿನ ಖಾಸಗಿ ಕಂಪನಿಗಳು ತಮ್ಮ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಲು ಎಸ್.ಎಸ್.ಎಲ್.ಸಿ, ಪಿಯುಸಿ, ಐಟಿಐ, ಡಿಪ್ಲೊಮಾ, ಯಾವುದೇ ಪದವಿ ಹೊಂದಿರುವ 18 ರಿಂದ 30 ವರ್ಷದೊಳಗಿನ ಪುರುಷ, ಮಹಿಳೆ ಅಭ್ಯರ್ಥಿಗಳನ್ನು ನೇರವಾಗಿ ಆಯ್ಕೆ ಮಾಡಿಕೊಳ್ಳಲಿದ್ದು, ಅಭ್ಯರ್ಥಿಗಳು ಅಗತ್ಯ ದಾಖಲೆಗಳಾದ 5 ಬಯೋಡಾಟಾ ಪ್ರತಿಗಳು, ಫೋಟೋಸ್, ವಿದ್ಯಾರ್ಹತೆಯ ಜೆರಾಕ್ಸ್ ಪ್ರತಿಗಳೊಂದಿಗೆ ಭಾಗವಹಿಸಬೇಕು. ಹೆಚ್ಚಿನ ಮಾಹಿತಿಗಾಗಿ ಉದ್ಯೋಗ ವಿನಿಮಯ ಕೇಂದ್ರ ಕಚೇರಿ, ಚಿತ್ರದುರ್ಗ ದೂರವಾಣಿ ಸಂಖ್ಯೆ 7022459064, 9945587060, 8105619020 ಗೆ ಸಂಪರ್ಕಿಸಬಹುದು.

### ಅನಾಮಧೇಯ ಶವ ಪತ್ತೆ

» **ಚಿತ್ರದುರ್ಗ**

ಚಿತ್ರದುರ್ಗ ನಗರದ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಪಕ್ಕದಲ್ಲಿರುವ ಯೂನಿಯನ್ ಪಾರ್ಕ್ ಬಳಿ, ಪುಟ್‌ಪಾತ್ ಮೇಲೆ ಅನಾಮಧೇಯ ವ್ಯಕ್ತಿಯ ಶವ ಪತ್ತೆಯಾಗಿದೆ. ಈ ಕುರಿತು ಕೋಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಮೃತ ವ್ಯಕ್ತಿಯು 55 ರಿಂದ 60 ವರ್ಷದವರಾಗಿದ್ದು, ದುಂಡು ಮುಖ, ಎಣ್ಣೆಗೆಂಪು ಮೈ ಬಣ್ಣ, ಧೃಡಕಾಯ ಶರೀರ ಹೊಂದಿದ್ದು, ತಲೆಯಲ್ಲಿ ಬಿಳಿ ಕೂದಲು, ಮುಖದ ಮೇಲೆ ಕುರುಚಲ ಬಿಳಿ ಗಡ್ಡ ಮೀಸೆ ಇರುತ್ತದೆ. ಊಟೋಪಚಾರ ಅಥವಾ ಖಾಯಿಲೆಯಿಂದ ವ್ಯಕ್ತಿಯು ಮೃತಪಟ್ಟಿದ್ದು, ವ್ಯಕ್ತಿಯ ಗುರುತು ಪತ್ತೆಯಾಗಿರುವುದಿಲ್ಲ. ಮೃತ ದೇಹವನ್ನು ಸಾರ್ವಜನಿಕ ಆಸ್ಪತ್ರೆಯಲ್ಲಿ ಇರಿಸಲಾಗಿದ್ದು, ವ್ಯಕ್ತಿಯ ಗುರುತು ಪತ್ತೆಯಾದವರು ಕೋಟೆ ಪೊಲೀಸ್ ಠಾಣೆಯನ್ನು ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಿದೆ.

## ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸೂಚನೆ

# ಬೆಳೆಹಾನಿ ಪ್ರದೇಶಗಳಿಗೆ ಭೇಟಿ ನೀಡಿ

» **ಚಿತ್ರದುರ್ಗ**

ಜಿಲ್ಲೆಯಲ್ಲಿ ಪೂರ್ವ ಮುಂಗಾರು ಮಳೆಯಿಂದಾಗಿ ಹಾನಿಗೊಳಗಾದ ಬೆಳೆಹಾನಿ ಪ್ರದೇಶಗಳಿಗೆ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲನೆ ನಡೆಸಿ ನಿಖರ ವರದಿ ನೀಡಬೇಕು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಬೆಳೆಹಾನಿ ಹಾಗೂ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೃಷಿ ಮತ್ತು ತೋಟಗಾರಿಕೆ ಅಧಿಕಾರಿಗಳು ಮಳೆಹಾನಿ ಪ್ರದೇಶಗಳ ಸ್ಥಳ ಪರಿಶೀಲನೆ ನಡೆಸುತ್ತಿಲ್ಲ ಎಂದು ರೈತರು ದೂರುತ್ತಿದ್ದು, ಬೆಳೆಹಾನಿ ಪ್ರದೇಶಗಳ ಸ್ಥಳ ಪರಿಶೀಲನೆ ನಡೆಸದ ಅಧಿಕಾರಿಗಳ ಅಮಾತಿಗೆ ಕ್ರಮ ವಹಿಸಲಾಗುವುದು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಎಚ್ಚರಿಕೆ ನೀಡಿದರು.



ಹೊಳಲ್ಕೆರೆ ತಾಲ್ಲೂಕಿನಲ್ಲಿ 25 ಎಕರೆ ಅಡಿಕೆ ಬೆಳೆ, 15 ಎಕರೆ ಮಾವು, ಹಾಗೂ 03 ಎಕರೆ ಮಾವು ಬೆಳೆ ಹಾನಿಯಾಗಿವೆ. ಚಳ್ಳಕೆರೆ ತಾಲ್ಲೂಕಿನಲ್ಲಿ 120 ಎಕರೆ ಪಪ್ಪಾಯಿ ಬೆಳೆ ಹಾಗೂ 8.30 ಎಕರೆ ಕೃಷಿ ಬೆಳೆಗಳು ಹಾನಿಯಾಗಿವೆ. ಚಿತ್ರದುರ್ಗ ತಾಲ್ಲೂಕಿನ ವಿ.ಪಾಳ್ಯ, ನಲ್ಲೆಕಟ್ಟೆ ಗ್ರಾಮಗಳಲ್ಲಿ ಅಡಿಕೆ ಬೆಳೆ ಹಾಗೂ ಪಪ್ಪಾಯಿ ಬೆಳೆ ಹಾನಿಯಾಗಿದೆ.

ಹಿರಿಯೂರು ತಾಲ್ಲೂಕಿನಲ್ಲಿ ಒಂದು ಜಾನುವಾರು ಮೃತಪಟ್ಟಿದೆ. ತೋಟಗಾರಿಕೆ ಬೆಳೆ ಹಾನಿಯಾಗಿದ್ದು, ಮನೆಯ ಮೇಲ್ಛಾವಣೆಯು ಹಾನಿಯಾಗಿದೆ. ಹೊಸದುರ್ಗ ತಾಲ್ಲೂಕಿನಲ್ಲಿ 4.20 ಎಕರೆ ತೋಟಗಾರಿಕೆ ಬೆಳೆ ಹಾನಿಯಾಗಿದೆ. ಮೊಳಕಾಲ್ಮುರು ತಾಲ್ಲೂಕಿನಲ್ಲಿ 1 ಹೆಕ್ಟೇರ್ ಕೃಷಿ ಹಾಗೂ 1 ಹೆಕ್ಟೇರ್ ತೋಟಗಾರಿಕೆ ಬೆಳೆಹಾನಿ ಹಾಗೂ ಒಂದು ಜಾನುವಾರು ಮೃತಪಟ್ಟಿದೆ, 06 ಮನೆಗಳು ಭಾಗಶಃ ಹಾನಿಗೊಳಗಾಗಿವೆ ಎಂದು ತಹಶೀಲ್ದಾರ್‌ಗಳು ಸಭೆಗೆ ಮಾಹಿತಿ ನೀಡಿದರು.

ಬೆಳೆಹಾನಿಗೆ ಸಂಬಂಧಿಸಿದಂತೆ ಎಲ್ಲ ವರದಿಯನ್ನು ಸಿದ್ದತೆ ಮಾಡಿಟ್ಟುಕೊಂಡು, ಪರಿಹಾರ ಸಾಫ್ಟವೇರ್ ಓಪನ್ ಆದ ತಕ್ಷಣ ಎಂಟ್ರಿ ಮಾಡಬೇಕು. ನಿಯಮಾನುಸಾರ ಪರಿಹಾರ ವಿತರಣೆಗೆ ಕ್ರಮವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ತಿಳಿಸಿದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ಬಸನಗೌಡ ಪಾಟೀಲ್ ಮಾತನಾಡಿ, ಹಿರಿಯೂರು ತಾಲ್ಲೂಕು ವ್ಯಾಪ್ತಿಯಲ್ಲಿ ಪ್ರಸ್ತುತ 7 ಗ್ರಾಮಗಳಿಗೆ ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ತಿಳಿಸಿದರು.

ಮುಂದಿನ ದಿನಗಳಲ್ಲಿ ಕುಡಿಯುವ ನೀರು ಸಮಸ್ಯೆ ಉದ್ಭವಿಸುವ ಸಮಸ್ಯೆಯಾತ್ಮಕ ಗ್ರಾಮಗಳ ನಿಖರ ಮಾಹಿತಿ ನೀಡುವಂತೆ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಉಪವಿಭಾಗಾಧಿಕಾರಿ ಮೆಹಬೂಬ್ ಜಿಲಾನ್ ಖುರೇಷಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ಬಸನಗೌಡ ಪಾಟೀಲ್ ಸೇರಿದಂತೆ ತಹಶೀಲ್ದಾರ್‌ಗಳು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

## ಹುಲಿಕುಂಟೆ: ಟಮೋಟೊ ಬೆಲೆ ಕುಸಿತ ಲಕ್ಷಾಂತರ ರೂಪಾಯಿ ನಷ್ಟ; ಸಾಲದ ಹೊರೆಯಲ್ಲಿ ಸಿಲುಕಿದ ರೈತ

» **ಚಳ್ಳಕೆರೆ**

ತಾಲ್ಲೂಕಿನ ಬೆಳಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹುಲಿಕುಂಟೆ ಗ್ರಾಮದಲ್ಲಿ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಟಮೋಟೊ ಬೆಳೆ ಬೆಳೆದಿದ್ದು, ಟಮೋಟೊ ಮಾರಾಟ ಮಾಡಲು ಮಾರುಕಟ್ಟೆಗೆ ಹೋದರೆ ಬೆಲೆ ಸಿಗದೆ ಲಕ್ಷಾಂತರ ರೂಪಾಯಿ ನಷ್ಟವನ್ನು ಟಮೋಟೊ ಬೆಳೆಗಾರರು ಅನುಭವಿಸುತ್ತಿದ್ದು, ಸರ್ಕಾರ ಇವರ ನೆರವಿಗೆ ದಾವಿಸದೇ ಇರುವುದು ನೋವಿನ ಸಂಗತಿ.





ಹುಲಿಕುಂಟೆ ಗ್ರಾಮದ ಕರಿಯಣ್ಣ ಎಂಬ ವ್ಯಕ್ತಿ ತನ್ನ ಜಮೀನಿನಲ್ಲಿ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಟಮೋಟೊ ಬೆಳೆ ಬೆಳೆದಿದ್ದ ಪ್ರಾರಂಭದಿಂದಲೂ ಟಮೋಟೊ ಬೆಳೆ ಉತ್ತಮವಾಗಿದ್ದು ಲಕ್ಷಾಂತರ ರೂಪಾಯಿ ಲಾಭವನ್ನು ರೈತ ನಿರೀಕ್ಷೆ ಮಾಡಿದ್ದ. ಆದರೆ, ಮಾರುಕಟ್ಟೆಯಲ್ಲಿ ತಾನು ಬೆಳೆದ ಟಮೋಟೊಗೆ ಸೂಕ್ತ ಬೆಲೆ ಸಿಗಲಿಲ್ಲ. ಇದರಿಂದ ನೊಂದ ರೈತ ಗಿಡದಲ್ಲಿರುವ ಟಮೋಟೊವನ್ನು ಬಿಡಿಸಿ ಮಾರಾಟ ಮಾಡಲು ಸಹ ಆರ್ಥಿಕ ಸಂಕಷ್ಟ ಎದುರಾಗಿದೆ. ರೈತ ಕರಿಯಣ್ಣ ಮಾಹಿತಿ ನೀಡಿ, ಗ್ರಾಮದ ರಿ.ಸರ್ವೆ ನಂ.143ರ 6.13 ಎಕರೆ ಪ್ರದೇಶದಲ್ಲಿ ಸಾಲ ಮಾಡಿ ಸುಮಾರು 5ಲಕ್ಷ ಹಣವನ್ನು ಟಮೋಟೊ ಬೆಳೆಗಾಗಿ ಖರ್ಚು ಮಾಡಿದ್ದೆ. ಪ್ರಾರಂಭದ ಹಂತದಿಂದಲೂ ಟಮೋಟೊ ಬೆಳೆ ಸೊಗಸಾಗಿ ಬೆಳೆದಿತ್ತು. ಎಲ್ಲರೂ ಟಮೋಟೋ ಹಣ್ಣಿನ ಗಾತ್ರನೋಡಿ ಉತ್ತಮ ಬೆಲೆ ಸಿಕ್ಕು ಲಾಭಗಳಿಸುತ್ತಿಯಎಂಬ ವಿಶ್ವಾಸ ವ್ಯಕ್ತಪಡಿಸಿದ್ದರೆ. ಆದರೆ, ಗಿಡದಿಂದ ಟಮೊಟೊ ಬಿಡಿಸಿ ಬಾಕ್ಸ್‌ನಲ್ಲಿ ಮಾರಾಟ ಮಾಡಲು ಹೋದಾಗ ಸುಮಾರು ಒಂದು ಬಾಕ್ಸ್(20ಕೆ.ಜಿ)ಕ್ಕೆ ಕೇವಲ 60ರೂಪಾಯಿ ಕೇಳಿದರು. ನನಗೆ ಯಾವುದೇ ಲಾಭಬರದೆ 5 ಲಕ್ಷಕ್ಕೂ ಹೆಚ್ಚು ನಷ್ಟ ಉಂಟಾಗಿದೆ. ತಾಲ್ಲೂಕು ಆಡಳಿತ ಸಹಾಯಕ್ಕೆ ಬರಬೇಕು ಎಂಬ ಆಸೆ ವ್ಯಕ್ತಪಡಿಸಿದ್ದಾನೆ.

## ರಾಜ್ಯ ಸರ್ಕಾರದ ಬೆಲೆ ಏರಿಕೆ ನೀತಿ ವಿರೋಧಿಸಿ ಪ್ರತಿಭಟನೆ



**ಚಿತ್ರದುರ್ಗ** :ರಾಜ್ಯ ಸರ್ಕಾರದ ಬೆಲೆ ಏರಿಕೆ ನೀತಿ ವಿರುದ್ದ ಸ್ಲಂ ಜನಾಂದೋಲನ–ಕರ್ನಾಟಕ, ಸಾವಿತ್ರಿಬಾಪುಲೆ ಮಹಿಳಾ ಸಂಘಟನೆ ಜಿಲ್ಲಾ ಘಟಕದ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಬುಧವಾರ ಪ್ರತಿಭಟನೆ ನಡೆಸಿ ಕಚೇರಿಯ ಸಹಾಯಕರಿಗೆ ಮನವಿ ಸಲ್ಲಿಸಲಾಯಿತು. ವಿಧಾನಸಭೆ ಚುನಾವಣೆ ಪೂರ್ವದಲ್ಲಿ ಐದು ಉಚಿತ ಗ್ಯಾರೆಂಟಿಗಳನ್ನು ಘೋಷಿಸಿ ಅಧಿಕಾರಕ್ಕೆ ಬಂದ ನಂತರ ಕೊಟ್ಟ ಭರವಸೆಯನ್ನು ಉಳಿಸಿಕೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯನವರು ದಿನನಿತ್ಯದ ಅಗತ್ಯ ವಸ್ತುಗಳ ಬೆಲೆ ಏರಿಸಿ ಜನಸಾಮಾನ್ಯರು ತತ್ತರಿಸುವಂತೆ ಮಾಡಿದ್ದಾರೆ. ಹಾಲು, ವಿದ್ಯುತ್, ಡೀಸೆಲ್ ಬೆಲೆ ಏರಿಸಿರುವುದಲ್ಲದೆ ತ್ಯಾಜ್ಯ ಸಂಗ್ರಹ, ಟೋಲ್ ಶುಲ್ಕ, ಆಸ್ತಿ ಮೇಲಿನ ತೆರಿಗೆಗಳನ್ನು ಹೆಚ್ಚಿಸಿದೆ. ಮೆಟ್ರೋ ದರ ಕೂಡ ಜಾಸ್ತಿಯಾಗಿದೆ. ಬಡವರ ಹಿತ ಕಾಪಾಡುವಲ್ಲಿ ವಿಫಲವಾಗಿರುವ ರಾಜ್ಯ ಸರ್ಕಾರ ಅಧಿಕಾರದಿಂದ ಕೆಳಗಿಳಿಯಲಿ ಎಂದರು.

**ಪ್ರಮುಖ ಸುದ್ದಿ**

# ಜೆ.ಎನ್.ಕೋಟೆಯಲ್ಲಿ ಕೋಳಿ ಫಾರಂ ಆರಂಭಕ್ಕೆ ಅನುಮತಿ ಬೇಡ

» **ಚಿತ್ರದುರ್ಗ**

ತಾಲ್ಲೂಕಿನ ಜೆ.ಎನ್.ಕೋಟೆ ಗ್ರಾಮದಲ್ಲಿ ಸುಮಾರು 40 ಎಕರೆ ವಿಸ್ತೀರ್ಣದಲ್ಲಿ ಅಂಧ್ರ ಪ್ರದೇಶದ ಉದ್ಯಮಿಯೋರ್ವರು ಕೋಳಿ ಫಾರಂ ಆರಂಭಿಸಲು ಉದ್ದೇಶಿಸಿದ್ದು, ಈ ಜಾಗದಲ್ಲಿ ಯಾವುದೇ ಕಾರಣಕ್ಕೂ ಸಹಾ ಕೋಳಿ ಫಾರಂನ್ನು ಪ್ರಾರಂಭಿಸಬಾರದೆಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಜಿಲ್ಲಾಧಿಕಾರಿಗಳನ್ನು ಒತ್ತಾಯಿಸಿದೆ.

ಈ ಸಂಭಂಧ ಚಿತ್ರದುರ್ಗದ ಪ್ರವಾಸಿ ಮಂದಿರದಿಂದ ಜಿಲ್ಲಾಧಿಕಾರಿಗಳ ಕಚೇರಿಯವರೆಗೂ ಪ್ರತಿಭಟನಾ ಮೆರವಣಿಗೆಯನ್ನು ನಡೆಸಿದ ರೈತರು ಈ ಭಾಗದಲ್ಲಿ ಅಂಧ್ರ ಪ್ರದೇಶದ ಉದ್ಯಮಿಯೋರ್ವರು ಕೋಳಿ ಫಾರಂ ಆರಂಭಿಸಲು ಉದ್ದೇಶಿಸಿದ್ದು, ಈ ಸಂಬಂಧ ಕಾಮಗಾರಿ ಆರಂಭಿಸಿದ್ದಾರೆ. ಈ ವಿಚಾರದಲ್ಲಿ ಅವರು ಗ್ರಾಮ ಪಂಚಾಯಿತಿ ಅನುಮತಿ ಪಡೆದುಕೊಂಡಿಲ್ಲ. ನಾವ್ಯಾರೂ ಕೂಡ ಕೋಳಿ ಫಾರಂ ವಿರೋಧಿಯಲ್ಲ ಕುಕ್ಕುಟೋದ್ಯಮ ಕೂಡಾ ರೈತ ಅಭಿವೃದ್ಧಿ ಪೂರಕವಾಗಿದ್ದು, ತಾಂತ್ರಿಕತೆ ಮೂಲಕ ಕೋಳಿ ಫಾರಂ ನಿರ್ವಹಣೆ ಮಾಡಬೇಕಿದೆ. ಹಾಲಿ ಕೋಳಿ ಫಾರಂ ನಿರ್ಮಿಸಲು ಉದ್ದೇಶಿಸಿರುವ ಪ್ರದೇಶ ಕೆ.ಎನ್.ಕೋಟೆ, ಕಸವನಹಳ್ಳಿ, ನೆರನಹಾಳು. ದೊಡ್ಡಸಿದ್ದವ್ವನಹಳ್ಳಿ ಕೇಂದ್ರ ಬಿಂದುವಾಗಿರುತ್ತದೆ. ಅಲ್ಲದೇ ರಾಷ್ಟ್ರೀಯ ಹೆದ್ದಾರಿಗೆ ಸಂಪರ್ಕ ರಸ್ತೆಯಾಗಿರುತ್ತದೆ. ಬೆಳಗಿನ ಜಾವ ಸುಮಾರು 5ಗಂಟೆಯಿಂದ ರಾತ್ರಿ 12ರವರೆಗೂ ನೂರಾರು ದ್ವಿಚಕ್ರವಾಹನ ವಾಣಿಜ್ಯ ವಾಹನ ಬಸ್ಸು, ಲಾರಿ, ಶಾಲಾ ವಾಹನಗಳು ದಿನನಿತ್ಯ ಸಂಚರಿಸುವ ರಸ್ತೆಯಾಗಿರುತ್ತದೆ ಬಸ್ ನಿಲ್ದಾಣವಾಗಿರುತ್ತದೆ. ಪ್ರತಿದಿನ ಕಸವನಹಳ್ಳಿ ಹಾಗೂ ನೆರೇನಹಾಳು ಗ್ರಾಮದ ಶಾಲಾ ಕಾಲೇಜು ವಿದ್ಯಾರ್ಥಿಗಳು ಇಲ್ಲಿಯೇ ಬಸ್ ಹತ್ತಿಕೊಂಡು ವಿದ್ಯಾಭ್ಯಾಸಕ್ಕೆ ತೆರಳುತ್ತಿದ್ದಾರೆ. ಕೋಳಿ ಫಾರಂ ಆರಂಭಿಸಿದರೆ ಅದರಿಂದ ಹೊರ ಸೂಸುವ ಕೆಟ್ಟ ವಾಸನೆ ಗ್ರಾಮೀಣ ಜನರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ ಎಂದಿದ್ದಾರೆ.




ಈಗಾಗಲೇ ಜಿ.ಎನ್.ಕೋಟೆ ಬಳಿ ಒಂದು ಕೋಳಿ ಫಾರಂ ಇದ್ದು, ಅದನ್ನು ಆರಂಭಿಸುವ ಮುನ್ನ ರೈತರಾರೂ ವಿರೋಧ ವ್ಯಕ್ತಪಡಿಸಿರಲಿಲ್ಲ. ನಂತರ ಈ ಫಾರಂನಿಂದ ಆದ ಪರಿಸರ ಹಾನಿ ಹಾಗೂ ರೈತರ ಬದುಕಿನ ಮೇಲೆ ಬೀರಿದ ಗಂಭೀರ ಪರಿಣಾಮಗಳು ನಿತ್ಯವೂ ಇಮ್ಮಡಿಯಾಗುತ್ತಿವೆ. ಜೆ.ಎನ್. ಕೋಟೆಯಿಂದ ಒಂದು ಕಿ.ಮೀ ದೂರದಲ್ಲಿರುವ ಈ ಕೋಳಿ ಫಾರಂ ತ್ಯಾಜ್ಯ ಒಂದೆಡೆ ಮಳೆ ಬಂದಾಗ ಕೆರೆಗೆ ಹರಿದು ಬಂದು ಕೆರೆಯ ತುಂಬಾ ಕಲುಷಿತವಾಗಿರುತ್ತದೆ. ಮತ್ತೊಂದೆಡೆ ನೊಣಗಳ ಹಾವಳಿ ವಿಪರೀತವಾಗಿದೆ ಮತ್ತು ಅಲ್ಲಿನ ಸುತ್ತಮುತ್ತ ರೈತರು ಯಾವುದೇ ತರಹದ ತರಕಾರಿ, ಹೂವು ಬೆಳೆಗಳು ಬೆಳೆಯದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಗ್ರಾಮದಲ್ಲಿ ನೆಮ್ಮದಿಯಿಂದ ಊಟ ಮಾಡಲು ಸಾಧ್ಯವಾಗದಂತಹ ವಾತಾವರಣ ಸೃಷ್ಟಿಯಾಗಿದೆ ಮತ್ತು ಬೀದಿ ನಾಯಿಗಳ ಹಾವಳಿಯಿಂದ ಬಡಪಾಯಿಗಳು ಸಾಕಿದ ಕುರಿ, ಮೇಕೆ, ದನಗಳನ್ನು ಮಾಂಸದ ರುಚಿಯಿಂದ ಸಾಕು ಪ್ರಾಣಿಗಳ ಮೇಲೆ ಎರಗಿ ಕೊಂದು ಹಾಕಿದ ಘಟನೆ ಸುತ್ತಮುತ್ತಲಿನ ಪ್ರದೇಶದಲ್ಲಿ ನಡೆದಿರುತ್ತದೆ. ಇದರಿಂದ ಗ್ರಾಮದ ಜನರು ಅಸಹನೀಯ ಪರಿಸ್ತಿತಿಯಲ್ಲಿ ಜನತೆ ಬದುಕುತ್ತಿದ್ದಾರೆ ಎಂದು ಪ್ರತಿಭಟನಾಕಾರರು ತಿಳಿಸಿದರು.

ಚಿತ್ರದುರ್ಗ ಸಮೀಪದ ಹಂಪಯ್ಯನಮಾಳಿಗೆ ಬಳಿ ಚಿತ್ರದುರ್ಗ ನಗರಸಭೆ ಘನತ್ಯಾಜ್ಯ ವಿಲೇವಾರಿ ಘಟಕವಿದ್ದು, ಇಲ್ಲಿಂದ ಹೊರ ಸೂಸುವ ಕೆಟ್ಟ ವಾಸನೆ ಹಾಗೂ ನೊಣಗಳ ಹಾವಳಿಯಿಂದ ಅಲ್ಲಿನ ಜನತೆ ಬೇಸತ್ತಿದ್ದಾರೆ. ಇದೇ ಪರಿಸ್ಥಿತಿ ಜೆ.ಎನ್.ಕೋಟೆ ಆಸುಪಾಸಿನಲ್ಲಿ ಉಲ್ಬಣಗೊಂಡಿದೆ. ಈ ಆಂದ್ರ ಮೂಲದ ಉದ್ಯಮಿ ಗ್ರಾಮ ಪಂಚಾಯಿತಿಂದ ಅನುಮತಿ ಪಡೆಯದೇ ಕಾಮಗಾರಿ ಆರಂಭಿಸಿರುವುದು ನಿಯಮಾವಳಿ ಮೀರಿ ವರ್ತಿಸುವ ಸಧ್ಯತೆಗಳು ಮೊದಲೆ ಗೋಚರಿಸಿದಂತಾಗಿದೆ. ಆದ್ದರಿಂದ ಕೋಳಿ ಫಾರಂ ನಿರ್ಮಿಸುವ ಮುನ್ನ ಗ್ರಾಮಸ್ಥರ ಸಭೆ ಕರೆದು ಅವರ ಅಭಿಪ್ರಾಯ ಕೇಳಬೇಕು ಇದರಿಂದ ಪರಿಸರದ ಮೇಲೆ ಆಗುವ ಅನಾಹುತಗಳ ಪರಿಗಣಿಸಬೇಕು. ಈ ತರಹದ ಯಾವುದೇ ಮುಂಜಾಗ್ರತೆ ಕ್ರಮಗಳ ಕೈಗೊಳ್ಳದೆ, ನಿಯಮಾನುಸಾರ ನಡೆದುಕೊಳ್ಳದೆ ಕೋಳಿಫಾರಂನ್ನು ಆರಂಭಿಸುವ ಹಂತದಲ್ಲಿದ್ದಾರೆ. ಈ ಕೂಡಲೇ ಜಿಲ್ಲಾಡಳಿತ ಈ ಸಂಬಂಧ ಸ್ಥಳಕ್ಕೆ ಆಗಮಿಸಿ ಜೆ.ಎನ್.ಕೋಟೆ ಹಾಗೂ ನೆರನಾಳು ಮತ್ತು ಕಸನವನಹಳ್ಳಿ ಸುತ್ತ ಮುತ್ತಲಿನ ಗ್ರಾಮಸ್ಥರ ಅಹವಾಲು ಆಲಿಸಬೇಕು, ಪರಿಸರ ಮೇಲಾಗುವ ಪರಿಣಾಮಗಳ ಅವಲೋಕಿಸಬೇಕು. ಯಾರೋ ಓರ್ವ ಉದ್ಯಮಿ ತನ್ನ ಲಾಭಕ್ಕಾಗಿ ಕೈಗೊಳ್ಳುವ ಚಟುವಟಿಕೆಗೆ ರೈತ ಸಮೂಹ ತೊಂದರೆ ಪಡುವ ಅಗತ್ಯವಿಲ್ಲ. ಹಾಗಾಗಿ ಕೋಳಿ ಫಾರಂಗೆ ಅನುಮತಿ ನೀಡಬಾರದು. ಅವರು ಹಳ್ಳಿಗಳು ಇಲ್ಲದ ಕಡೆ, ಜನವಸತಿ ಪ್ರದೇಶ ಬಿಟ್ಟು ಕೋಳಿ ಫಾರಂ ಆರಂಭಿಸಿಕೊಳ್ಳಲು ನಮ್ಮದೇನೂ ವಿರೋದವಿಲ್ಲವೆಂದು ಪ್ರತಿಭಟನಾಕಾರರು ತಿಳಿಸಿದ್ದಾರೆ.

## ಫಾಸ್ಟ್ ನ್ಯೂಸ್

### ವರಪ್ರದ ಗಣಪತಿ ಸನ್ನಿಧಿಯಲ್ಲಿ ಸಂಕಷ್ಟಹರ ಚತುರ್ಥಿ ವಿಶೇಷ ಪೂಜೆ: ನೂರಾರು ಭಕ್ತರು ಬಾಗಿ



» **ಚಳ್ಳಕೆರೆ**

ನಗರದ ಸೀತಾರಾಮ ಬಡಾವಣೆಯ ವರಪ್ರದಗಣಪತಿ ದೇವಸ್ಥಾನದಲ್ಲಿ ಸಂಕಷ್ಟಹರಿ ಗಣಪತಿ ಪೂಜೆಯನ್ನು ಭಕ್ತಿ, ಶ್ರದ್ದೆಯಿಂದ ನಡೆಸಲಾಯಿತು. ಸುತ್ತಮುತ್ತಲಿನ ನೂರಾರು ಭಕ್ತರು ಆಗಮಿಸಿ ದೇವರಿಗೆ ನಮಸ್ಕರಿಸಿ ಪೂಜಾ ಕಾರ್ಯದಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿದರು. ದೇವಸ್ಥಾನದ ವ್ಯವಸ್ಥಾಪಕರಾದ ಸಿ.ಎಸ್. ಗೋಪಿನಾಥ, ಪ್ರತಿತಿಂಗಳು ದೇವಸ್ಥಾನದಲ್ಲಿ ಸಂಕಷ್ಟಹರಿ ಗಣಪತಿ ಪೂಜೆಯನ್ನು ನೆರವೇರಿಸಲಾಗುವುದು. ಈ ಬಗ್ಗೆ ಈಗಾಗಲೇ ಸಾಕಷ್ಟು ಭಕ್ತರಿಗೆ ಮಾಹಿತಿ ನೀಡಲಾಗಿದೆ. ಸಂಕಷ್ಟಹರಿಗಣಪತಿ ಪೂಜೆಯೂ ಸೇರಿದಂತೆ ಇನ್ನೂ ಹಲವು ಬಗೆಯಧಾರ್ಮಿಕ ಕಾರ್ಯಕ್ರಮ ಹಮ್ಮಿಕೊಳ್ಳಲು ಚಿಂತನೆ ನಡೆಸಲಾಗಿದೆ. ಹೆಚ್ಚಿನ ಮಾಹಿತಿಗೆ ದೇವಸ್ಥಾನದ ಅರ್ಚಕ ಕೆ.ನಾಗೇಶ್‌ಭಾರದ್ವಾಜ್‌ರವರನ್ನು ಭೇಟಿ ಮಾಡಿ ಅಥವಾ ಸಿ.ಎಸ್.ಗೋಪಿನಾಥ ಮೊ.99641 10797 ಸಂಪರ್ಕಿಸಲು ಮನವಿ ಮಾಡಿದ್ದಾರೆ.

### ಏಪ್ರಿಲ್ 17 ರಂದು ಅಕ್ಕ ಕೆಫೆ ಉದ್ಘಾಟನೆ

» **ದಾವಣಗೆರೆ**

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದಡಿ ಅಕ್ಕ ಕೆಫೆಯನ್ನು ಹರಿಹರ ತಾಲ್ಲೂಕಿನ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಮಳಿಗೆ ಸಂಖ್ಯೆ–1 ಮತ್ತು 2 ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಹತ್ತಿರ ಏಪ್ರಿಲ್ 17 ರಂದು ಬೆಳಿಗ್ಗೆ 10.30ಕ್ಕೆ ಅಕ್ಕ ಕೆಫೆಯನ್ನು ಪ್ರಾರಂಭಿಸಲಾಗುವುದು ಎಂದು ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರು ತಿಳಿಸಿದ್ದಾರೆ.

### ಚಾಂಪಿಯನ್ಸ್ ಟ್ರೋಫಿ ಗೆದ್ದ ಲಾಯಲ್ ಆರ್ಸಿಬಿಯನ್ಸ್ ತಂಡ



» **ದಾವಣಗೆರೆ**

ಚನ್ನಗಿರಿ ತಾಲ್ಲೂಕಿನ ಕಬ್ಬಳ ಗ್ರಾಮದಲ್ಲಿ ಎಕೆ–47 ಕ್ರಿಕೆಟ್ ಕ್ಲಬ್ ನ ವತಿಯಿಂದ ಆಯೋಜಿಸಲಾಗಿದ್ದ "ಕಬ್ಬಳ ಕ್ರಿಕೆಟ್ ಹಬ್ಬ ಸೀಸನ್ 11ರ" ಟೂರ್ನಿಯಲ್ಲಿ ಲಾಯಲ್ ಆರ್ಸಿಬಿಯನ್ಸ್ ತಂಡವು ಎಸ್.ಎಸ್ ಐಕಾನ್ ತಂಡವನ್ನು ಸೋಲಿಸಿ ಚಾಂಪಿಯನ್‌ಶಿಪ್ ಮತ್ತು ನಗದು ಬಹುಮಾನ ₹ 33 ಸಾವಿರ ತನ್ನದಾಗಿಸಿಕೊಂಡಿತು. ದ್ವಿತೀಯ ಬಹುಮಾನ ಪಡೆದ ಎಸ್.ಎಸ್ ಐಕಾನ್ ತಂಡಕ್ಕೆ ಪಾರಿತೋಷಕ ಮತ್ತು ₹ 22 ಸಾವಿರ ನಗದು ನೀಡಲಾಯಿತು. ರಿಷಿ ಭುವಿ ಕ್ರಿಕೆಟರ್ಸ್ ತಂಡವು ಮೂರನೇ ಸ್ಥಾನ ಪಡೆಯಿತು.ಐಪಿಎಲ್ ಮಾದರಿಯಲ್ಲಿ ಕ್ರಿಕೆಟ್ ಟೂರ್ನಿಯನ್ನು ಆಯೋಜಿಸಲಾಗಿತ್ತು. ಈ ಸೌಹಾರ್ದಯುತ ಪಂದ್ಯಾವಳಿಯಲ್ಲಿ ಎಂಟು ತಂಡಗಳು ಭಾಗವಹಿಸಿದ್ದು, ಸೋಲು ಗೆಲುವು ಸಾಮಾನ್ಯವಾಗಿದ್ದು ಕ್ರೀಡಾಪಟುಗಳು ಕ್ರೀಡಾ ಸ್ಫೂರ್ತಿಯಿಂದ ಭಾಗವಹಿಸಿದ್ದರು. ಕಬ್ಬಳ ಕ್ರಿಕೆಟ್ ಹಬ್ಬದ ಮೂಲ ಧ್ಯೇಯ ವ್ಯಾಕ್ಯ "ಕ್ರೀಡೆ ಸ್ನೇಹಕ್ಕಾಗಿ ಹೊರತು ಸಮರಕ್ಕಾಗಿ ಅಲ್ಲ' ಎಂಬ ಹೆಸರಿನಡಿ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಿದ್ದು, ಬಹುಮಾನಗಳನ್ನುಸ್ಥಳಿಯರುಪ್ರಾಯೋಜಿಸಿದ್ದರು. ಒಟ್ಟಿನಲ್ಲಿಮೂರು ದಿನಗಳ ಕಾಲ ಟೂರ್ನಮೆಂಟ್ ಯಶಸ್ವಿಯಾಗಿ ನಡೆಯಿತು.ಈ ವೇಳೆ ಗ್ರಾಮದ ಮುಖಂಡರಾದ ಮನೋಹರ್ ನಾಯ್ಕ, ಬಿಜೆಪಿ ಶಿವ ನಾಯ್ಕ, ಸತೀಶ್ ನಾಯ್ಕ, ಹಿರಿಯ ಆಟಗಾರರಾದ ಸುಧೀರ್, ಸ್ವಾಮಿ, ಲಾಕೇಶ್, ಲೋಕೇಶ್, ಸುಪ್ರೀತ್, ದಾಗಿ ಚೇತನ್, ಅವಿನಾಶ್ ಗೌಡ, ಧನರಾಜ್, ಕೇಶವ, ಹನುಮಂತ, ಶರತ್, ಕಾರ್ತಿಕ್, ನಿಖಿಲ್, ನಟರಾಜ್, ಮಧು ಸೇರಿದಂತೆ ಎಲ್ಲಾ ತಂಡದ ಪ್ರಾಂಚಿಸಿಗಳು, ಆಟಗಾರರು ಹಾಗೂ ಕ್ರೀಡಾ ಪ್ರೇಮಿಗಳು ಹಾಜರಿದ್ದರು.

---

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಿಂದ ಪ್ರಗತಿ ಪರಿಶೀಲನಾ ಸಭೆ– ತುರ್ತು ಸಂದರ್ಭದಲ್ಲಿ ಆತ್ಮ ರಕ್ಷಣೆ, ಸಹಾಯವಾಣಿ ಸಂಖ್ಯೆ ತಿಳಿಸಿ; ಡಾ; ನಾಗಲಕ್ಷ್ಮೀ ಚೌಧರಿ

# ಮಹಿಳೆಯರ ಮೇಲಿನ ದೌರ್ಜನ್ಯ ತಡೆಗಟ್ಟಲು ವ್ಯಾಪಕ ಅರಿವು ಕಾರ್ಯಕ್ರಮಗಳು ನಡೆಯಲಿ

» **ದಾವಣಗೆರೆ**

ಮಹಿಳೆ ಹಾಗೂ ಮಕ್ಕಳ ಮೇಲಿನ ಅತ್ಯಾಚಾರಕ್ಕೆ ಕಡಿವಾಣ ಹಾಕಲು ಶಾಲಾ, ಕಾಲೇಜುಗಳಲ್ಲಿ ಆತ್ಮ ರಕ್ಷಣಾ ಕಲೆ, ಕೌಶಲ್ಯತೆ ಮತ್ತು ತುರ್ತು ಸಹಾಯವಾಣಿಗಳ ಬಗ್ಗೆ ವ್ಯಾಪಕ ಅರಿವು ಮೂಡಿಸುವ ಅಗತ್ಯವಿದೆ ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಡಾ; ನಾಗಲಕ್ಷ್ಮೀ ಚೌಧರಿ ತಿಳಿಸಿದರು.



ಅವರು ಬುಧವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಹಿಳೆಯರ ಸಬಲೀಕರಣದ ಕುರಿತು ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದರು. ಇಲಾಖೆಯಿಂದ ಸರ್ಕಾರಿ ಶಾಲಾ, ಕಾಲೇಜು, ಹಾಸ್ಟೆಲ್‌ಗಳಲ್ಲಿನ ಹೆಣ್ಣು ಮಕ್ಕಳಿಗೆ ಆತ್ಮ ರಕ್ಷಣೆಯ ಬಗ್ಗೆ ಅರಿವು ಮೂಡಿಸಿದ್ದು ಇದೇ ರೀತಿ ಖಾಸಗಿಯ ಎಲ್ಲಾ ಶಾಲಾ, ಕಾಲೇಜು ಮತ್ತು ಹಾಸ್ಟೆಲ್‌ಗಳಲ್ಲಿಯು ಬಾಲಕಿಯರು ಹಾಗೂ ಹೆಣ್ಣು ಮಕ್ಕಳ ರಕ್ಷಣೆ, ದೌರ್ಜನ್ಯ ತಡೆ ಕುರಿತು ವ್ಯಾಪಕ ಅರಿವು ಮೂಡಿಸುವುದರಿಂದ ಪೋಕ್ಸೋ, ಲೈಂಗಿಕ ದೌರ್ಜನ್ಯ ಪ್ರಕರಣಗಳು ಕಡಿಮೆಯಾಗಲಿವೆ. ಕೆಲವು ಶಾಲಾ, ಕಾಲೇಜುಗಳಲ್ಲಿ ಶಿಕ್ಷಕರಿಂದಲೇ ಲೈಂಗಿಕ ಕಿರುಕುಳ ಪ್ರಕರಣಗಳನ್ನು ನೋಡಲಾಗಿದೆ. ಆದ್ದರಿಂದ ಹೆಣ್ಣು ಮಕ್ಕಳು ದೌರ್ಜನ್ಯಕ್ಕೆ ಒಳಗಾದಾಗ ಧೈರ್ಯವಾಗಿ ದೂರುಗಳನ್ನು ನೀಡುವ ನಿಟ್ಟಿನಲ್ಲಿ ಆತ್ಮಸ್ಥೈರ್ಯ ತುಂಬುವ ಕೆಲಸವನ್ನು ವ್ಯಾಪಕವಾಗಿ ಮಾಡಬೇಕಾಗಿದೆ ಎಂದರು. ಸಿಸಿಟಿವಿ ಹೆಚ್ಚಳಕ್ಕೆ ಸೂಚನೆ; ನಗರ ಹಾಗೂ ಪಟ್ಟಣ ಸೇರಿದಂತೆ ಗ್ರಾಮೀಣ ಪ್ರದೇಶಗಳಲ್ಲಿಯು ಸಿಸಿ ಕ್ಯಾಮೆರಾಗಳನ್ನು ಹೆಚ್ಚಿಸಬೇಕು. ಮೊನ್ನೆ ನಡೆದ ಹುಬ್ಬಳಿ ಪ್ರಕರಣದಲ್ಲಿ ಸಿಸಿಟಿವಿಯಿಂದತುರ್ತಾಗಿಅಪರಾಧಿಯನ್ನು ಪತ್ತೆ ಮಾಡಲು ಸಾಧ್ಯವಾಯಿತು. ಎಲ್ಲಾ ಶಾಲಾ, ಕಾಲೇಜುಗಳಲ್ಲಿ ಸಂಪೂರ್ಣ ನಿಗಾ ವಹಿಸಲು ತಿಳಿಸಿದರು.

ದೌರ್ಜನ್ಯ ಸೇರಿದಂತೆ ವಿವಿಧ ಕಾರಣಗಳಿಂದ ಮಹಿಳೆಯರ ಕೊಲೆ ಪ್ರಕರಣಗಳು ವರದಿಯಾಗಿದ್ದು ಮಹಿಳೆಯರ ಮೇಲಿನ ಯಾವುದೇ ದೌರ್ಜನ್ಯ ಪ್ರಕರಣಗಳು ನಡೆಯದಂತೆ ಮುನ್ನೆಚ್ಚರಿಕೆ ವಹಿಸಬೇಕಾಗಿದೆ. 2023 ರಿಂದ 2025 ರ ವರೆಗೆ 19 ಮಹಿಳಾ ಕೊಲೆ ಪ್ರಕರಣ, 15 ವರದಕ್ಷಿಣ ಸಾವು, ಅನೈತಿಕ ಸಾಗಣೆ ತಡೆ ಐಟಿಪಿ ಕಾಯಿದೆಯಡಿ 14 ಪ್ರಕರಣ, ಕಿರುಕುಳ ಪ್ರಕರಣದಡಿ 152, ಡಿಪಿ ಕಾಯಿದೆಯಡಿ 183, ಮಹಿಳಾ ಕಿರುಕುಳದಡಿ 475 ಪ್ರಕರಣಗಳು ದಾಖಲಾಗಿವೆ. ಮಹಿಳೆ ಕಾಣೆಯಡಿ 1370 ಮಹಿಳೆಯರು ಹಾಗೂ 170 ಹುಡುಗಿಯರು ಕಾಣೆಯಾದ ಪ್ರಕರಣ ದಾಖಲಿಸಿದ್ದು ಹಲವು ಪ್ರಕರಣಗಳಲ್ಲಿ ಪತ್ತೆಹಚ್ಚಲಾಗಿದೆ. ಮತ್ತು ಕೆಲವು ಪ್ರಕರಣಗಳು ತನಿಖೆ ಹಂತದಲ್ಲಿವೆ. ಮಹಿಳೆಯರ ಮೇಲಿನ ದೌರ್ಜನ್ಯ ಸೇರಿ ಅಪರಾಧ ಪ್ರಕರಣಗಳನ್ನು ಕಡಿಮೆ ಮಾಡಲು ಮಹಿಳಾ ಕೌನ್ಸಿಲಿಂಗ್ ಕೇಂದ್ರವನ್ನು ಆರಂಭಿಸಲು ರಾಷ್ಟ್ರೀಯ ಮಹಿಳಾ ಆಯೋಗ ನಿರ್ಧರಿಸಿದ್ದು ರಾಜ್ಯದಲ್ಲಿಯು ಈ ಕೇಂದ್ರವನ್ನು ಆರಂಭಿಸಲು ಉದ್ದೇಶಿಸಲಾಗಿದೆ. ಮಹಿಳಾ ದೌರ್ಜನ್ಯ ಪ್ರಕರಣಗಳನ್ನು ಕಡಿಮೆ ಮಾಡಲು ದಾವಣಗೆರೆಯಲ್ಲಿ ಹೊಸದಾಗಿ ಮಹಿಳೆಯರ ಕೌನ್ಸಿಲಿಂಗ್ ಕೇಂದ್ರವನ್ನು ಆದಷ್ಟು ಶೀಘ್ರದಲ್ಲಿಯೇ ಆರಂಭಿಸಲಾಗುತ್ತದೆ ಎಂದರು.

ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಹಾಕಿ; ಅನೇಕ ಗ್ರಾಮಾಂತರ ಪ್ರದೇಶದಲ್ಲಿ ಅಕ್ರಮವಾಗಿ ಅಂಗಡಿ, ಮನೆಗಳಲ್ಲಿ ಮದ್ಯವನ್ನು ಮಾರಾಟ ಮಾಡುವುದರಿಂದ ಕುಟುಂಬಗಳು ಹಾಳಾಗಿವೆ ಎಂದು ಮಹಿಳೆಯರ ದೂರುಗಳಾಗಿವೆ. ಯಾವುದೇ ಕಾರಣಕ್ಕೂ ಅಕ್ರಮ ಮದ್ಯ ಮಾರಾಟಕ್ಕೆ ಅವಕಾಶ ಮಾಡಿಕೊಡಬಾರದೆಂದರು.

ಮೂಲಭೂತ ಸೌಕರ್ಯ ಕಲ್ಪಿಸಿ; ಪಂಚಾಯಿತಿಗಳಿಂದ ಗ್ರಾಮಗಳಲ್ಲಿ ಕನಿಷ್ಠ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಕೆಲಸ ಮಾಡಬೇಕಾಗಿದೆ. ಜಗಳೂರು ತಾ; ಹನುಮಂತಪುರ ಗೊಲ್ಲರಹಟ್ಟಿಯಲ್ಲಿ ಕನಿಷ್ಠ ಮೂಲಭೂತ ಸೌಕರ್ಯದ ಕೊರತೆ ಇದ್ದು ಇಲ್ಲಿ ಸರಿಯಾದ ರಸ್ತೆ, ಆರ್.ಓ, ಬಸ್ ಸೌಕರ್ಯಗಳಿಲ್ಲ. ಇಲ್ಲಿ ತುರ್ತಾಗಿ ಕೆಎಸ್‌ಆರ್‌ಟಿಸಿ ಬಸ್ ನೀಡಲು ಮತ್ತು ವಿದ್ಯುತ್ ಪರಿವರ್ತಕ ಹಾಕಿ ನಿರಂತರ ವಿದ್ಯುತ್ ನೀಡಲು ತಿಳಿಸಿದರು.

ಗ್ರಾಮಸಭೆ; ಗ್ರಾಮ ಪಂಚಾಯಿತಿಗಳಲ್ಲಿ ನಿಯಮಿತವಾಗಿ ಗ್ರಾಮಸಭೆಗಳು ನಡೆಯುವಂತೆ ನೋಡಿಕೊಳ್ಳಬೇಕು. ಗ್ರಾಮಸಭೆಗಳಲ್ಲಿ ಮಹಿಳೆಯರು ಬಂದು ತಮಗೆ ಬೇಕಾದ ಅನುಕೂಲತೆಗಳ ಬಗ್ಗೆ ಕೇಳುವರು, ಇದರಿಂದ ಅನೇಕ ಮಹಿಳೆಯರಿಗೆ ಅನುಕೂಲವಾಗಲಿದೆ ಎಂದ ಅವರು ಆಸ್ಪತ್ರೆಗಳಲ್ಲಿ ಸ್ವಚ್ಚತೆ, ಔಷಧಗಳ ದಾಸ್ತಾನು, ಹೊರಗುತ್ತಿಗೆಯಡಿ ಕಾರ್ಮಿಕರಿಗೆ ಆಗುತ್ತಿರುವ ಶೋಷಣೆ ತಪ್ಪಿಸಲು ಆದಷ್ಟು ಬೇಗ ಜಿಲ್ಲಾ ಕಾರ್ಮಿಕರ ಸೊಸೈಟಿ ಆರಂಭಿಸಲು ತಿಳಿಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್, ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಉಮಾ ಪ್ರಶಾಂತ್, ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

---

# ಕಾಲ್ಕೆರೆ ಗ್ರಾಮದಲ್ಲಿ ನೂತನ ಸಿಸಿರಸ್ತೆ ಕಾಮಗಾರಿಗೆ ಶಾಸಕ ಡಾ.ಎಂ.ಚಂದ್ರಪ್ಪನವರಿಂದ ಭೂಮಿಪೂಜೆ

» **ಹೊಳಲ್ಕೆರೆ**

ತಾಲ್ಲೂಕಿನಾದ್ಯಂತ 493 ಹಳ್ಳಿಗಳಲ್ಲಿ ಎಲ್ಲಿಏನುಅಭಿವೃದ್ದಿಕೆಲಸಮಾಡಿದರೆ ಜನರಿಗೆ ಒಳ್ಳೆಯದಾಗುತ್ತದೆನ್ನುವ ಅರಿವಿಟ್ಟುಕೊಂಡು ಕೆಲಸ ಮಾಡುವ ರಾಜಕಾರಣಿ ನಾನು ಎಂದು ಶಾಸಕ ಡಾ.ಎಂ.ಚಂದ್ರಪ್ಪ ಹೇಳಿದರು.



ತಾಲ್ಲೂಕಿನ ಕಾಲ್ಕೆರೆ ಗ್ರಾಮದಲ್ಲಿ 75 ಲಕ್ಷ ರೂ.ವೆಚ್ಚದಲ್ಲಿ ನೂತನ ಸಿ.ಸಿ.ರಸ್ತೆ ಕಾಮಗಾರಿಗೆ ಬುಧವಾರ ಭೂಮಿಪೂಜೆ ಸಲ್ಲಿಸಿ ಮಾತನಾಡಿದರು.

ಹಿರಿಯೂರಿನ ವಾಣಿವಿಲಾಸ ಸಾಗರದಿಂದ ನೀರು ತಂದು ಕ್ಷೇತ್ರಾದ್ಯಂತ ಪ್ರತಿ ಮನೆ ಮನೆಗೂ ಶುದ್ದ ಕುಡಿಯುವ ನೀರು ಪೂರೈಸುವುದಕ್ಕಾಗಿ 367 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ. ನೀರಿನ ಮಧ್ಯೆ ನಲವತ್ತು ಅಡಿ ಆಳದಲ್ಲಿ ಪಿಲ್ಲರ್ ಹಾಕಿ ಮಿಷನ್ ಕೂರಿಸಿ ಫಿಲ್ಟರ್ ಅಳವಡಿಸಲಾಗಿದ್ದು, ಬಹುತೇಕ ಪೈಪ್‌ಲೈನ್ ಕಾಮಗಾರಿ ಮುಗಿದಿದೆ. ರೈತರ ತೋಟಗಳು ಒಣಗಬಾರದೆಂದು ನಿರಂತರ ವಿದ್ಯುತ್, ಗುಣಮಟ್ಟದ ಸಿ.ಸಿ.ರಸ್ತೆ, ಶಾಲಾ–ಕಾಲೇಜು, ಹೈಟೆಕ್ ಆಸ್ಪತ್ರೆ ಕಟ್ಟಿಸಿದ್ದೇನೆಂದು ತಿಳಿಸಿದರು.

37 ಕೋಟಿ ರೂ.ಹೆಚ್ಚುವರಿ ಹಣ ಖರ್ಚು ಮಾಡಿ ಕೆರೆಗೆ ನೀರು ತುಂಬಿಸಿದ್ದೇನೆ. ಚುನಾವಣೆಯಲ್ಲಿ ಮತ ಹಾಕುವುದು ಒಂದು ನಿಮಿಷದ ಕೆಲಸ. ಗೆದ್ದ ನಂತರ ಐದು ವರ್ಷಗಳ ಕಾಲ ನಿಮ್ಮ ಮನೆ ಮಗನಾಗಿ ಬದ್ದತೆಯಿಟ್ಟುಕೊಂಡು ಹಗಲು–ರಾತ್ರಿ ಅಭಿವೃದ್ದಿ ಕೆಲಸ ಮಾಡುವ ಅರಿವಿಟ್ಟುಕೊಂಡಿದ್ದೇನೆ. ಅಧಿಕಾರ ಶಾಶ್ವತವಲ್ಲ. ಇರುವಷ್ಟು ದಿನ ಹತ್ತಾರು ಜನ ಮೆಚ್ಚುವ ರೀತಿ ಕೆಲಸ ಮಾಡುತ್ತೇನೆಂದು ಜನರಿಗೆ ಭರವಸೆ ನೀಡಿದರು.

ಗ್ರಾಮ ಪಂಚಾಯಿತಿ ಸದಸ್ಯರುಗಳಾದಡಿ.ಎಸ್.ಕುಮಾರ್, ಈರಣ್ಣನಾಯ್ಕ, ಷಣ್ಮುಖಪ್ಪ, ಪರಮೇಶಣ್ಣ, ಜಗದೀಶ್, ಪ್ರಭಣ್ಣ ಹಾಗೂ ಗ್ರಾಮದ ಮುಖಂಡರುಗಳು ಈ ಸಂದರ್ಭದಲ್ಲಿ ಹಾಜರಿದ್ದರು.

# ಹಜ್ ಯಾತ್ರಾರ್ಥಿಗಳಿಗೆ ಉಚಿತ ಆರೋಗ್ಯ ತಪಾಸಣೆ, ಲಸಿಕಾಕರಣ



» **ಚಿತ್ರದುರ್ಗ**

ಆರೋಗ್ಯ ಇಲಾಖೆ, ಜಿಲ್ಲಾ ಆಸ್ಪತ್ರೆ, ಹಜ್ ಸಮಿತಿ ಸಹಯೋಗದೊಂದಿಗೆ ಬುಧವಾರ ನಗರದ ಎಂ.ಕೆ.ಪ್ಯಾಲೇಸ್ ಸಭಾಂಗಣದಲ್ಲಿ ಜಿಲ್ಲೆಯ 99 ಹಜ್ ಯಾತ್ರಾರ್ಥಿಗಳಿಗೆ ಉಚಿತ ಆರೋಗ್ಯ ತಪಾಸಣೆ ನಡೆಸಿ, ವಿವಿಧ ಲಸಿಕೆಗಳನ್ನು ನೀಡಲಾಯಿತು. ಹಜ್ ಯಾತ್ರಾರ್ಥಿಗಳಿಗೆ ಓರಲ್ ಪೋಲಿಯೋ, ಕಿಒಒಗಿ (Quadrivalent meningococcal meningitis vaccine) ಲಸಿಕೆ ಹಾಗೂ 65 ವರ್ಷ ಮೇಲ್ಪಟ್ಟ 24 ಯಾತ್ರಾರ್ಥಿಗಳಿಗೆ ಹೈ ರಿಸ್ಕ್ ಸೀಜನಲ್ ಇನ್ಫ್ಲೂಯಂಜಾ ಲಸಿಕೆ ನೀಡಲಾಗಿದೆ. ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎಂ.ಕೆ.ತಾಜ್‌ಪೀರ್, ಜಿಲ್ಲಾ ಹಜ್ ಸಮಿತಿ ವ್ಯವಸ್ಥಾಪಕ ಹಾಜಿ ದಾದಪೀರ್, ರಾಜ್ಯ ಹಜ್ ಸಮಿತಿ ಸಂಯೋಜಕ ಸೈಯದ್ ನಾಸಿರ್, ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ಡಿ.ಎಂ.ಅಭಿನವ್, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎಸ್.ಪಿ. ರವೀಂದ್ರ, ವೈದ್ಯರಾದ ಡಾ.ಸತೀಶ್, ಡಾ.ಶಿಲ್ಪಾ, ಡಾ.ಬಿಲಾಲ್, ತಾಲ್ಲೂಕು ಆರೋಗ್ಯ ಶಿಕ್ಷಣಾಧಿಕಾರಿ ಎನ್. ಎಸ್.ಮಂಜುನಾಥ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಿ.ಮೂಗಪ್ಪ, ಜಿಲ್ಲಾ ಲಸಿಕಾ ವ್ಯಪಸ್ಥಾಪಕ ವೀರೇಶ, ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಎಂ.ಗಂಗಾಧರ್, ಗುರುಮೂರ್ತಿ, ಸಮುದಾಯ ಆರೋಗ್ಯಾಧಿಕಾರಿಗಳು ಫಾರ್ಮಸಿ ಅಧಿಕಾರಿಗಳು, ಪ್ರಾಥಮಿಕ ಆರೋಗ್ಯ ಸುರಕ್ಷತಾಧಿಕಾರಿಗಳು, ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

---

**ಪ್ರಮುಖ ಸುದ್ದಿ**

# ಆರ್ಟ್ ಗ್ಯಾಲರಿ ನಿರ್ಮಾಣ ಪ್ರಕ್ರಿಯೆಗೆ ಸಿಗಲಿದೆ ವೇಗ

» **ಚಿತ್ರದುರ್ಗ**

ಜಿಲ್ಲೆಯಲ್ಲಿ ವರ್ಷದಿಂದ ವರ್ಷಕ್ಕೆ ಚಿತ್ರ ಕಲಾವಿದರ ಸಂಖ್ಯೆ ಹೆಚ್ಚಾಗುತ್ತಿದೆ. ಆರ್ಟ್ ಗ್ಯಾಲರಿನಿರ್ಮಿಸುವಮೂಲಕಕಲಾವಿದರಿಗೆ ತಮ್ಮ ಪ್ರತಿಭೆ ಪ್ರದರ್ಶನಕ್ಕೆ ಸೂಕ್ತ ವೇದಿಕೆ ಕಲ್ಪಿಸಲು ಚಿಂತನೆ ನಡೆಸಲಾಗಿದೆ ಎಂದು ಲಲಿತ ಕಲಾ ಅಕಾಡೆಮಿ ಸದಸ್ಯ ಸಿ.ಕಣ್ಮೇಶ್ ತಿಳಿಸಿದರು.



ನಗರದ ಮಯೂರು ಯಾತ್ರಿ ನಿವಾಸದ ಆವರಣದಲ್ಲಿ ಲಲಿತ ಕಲಾ ಅಕಾಡೆಮಿ, ಚಿತ್ರ ಕಲಾವಿದರ ಬಳಗದಿಂದ ಆಯೋಜಿಸಿದ್ದ ವಿಶ್ವ ಕಲಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಚಿತ್ರ ಕಲಾವಿದರಿಗೆ ಆರ್ಟ್ ಗ್ಯಾಲರಿ ತುಂಬಾ ಅವಶ್ಯ. ಜತೆಗೆ ಅದು ಜಿಲ್ಲೆಗೆ ಒಂದು ಕಲಾ ಸ್ಪರ್ಶ ನೀಡುತ್ತದೆ. ಗ್ಯಾಲರಿ ನಿರ್ಮಾಣದ ಬಗ್ಗೆ ಈ ಹಿಂದೆ ಒಂದಿಷ್ಟು ಪ್ರಕ್ರಿಯೆ ನಡೆಸಲಾಗಿತ್ತು. ಆದರೆ ನಾನಾ ಕಾರಣದಿಂದ ನನೆಗುದಿಗೆ ಬಿದ್ದಿದೆ. ಶೀಘ್ರ ಜಿಲ್ಲೆಯ ಎಲ್ಲ ಚಿತ್ರಕಲಾವಿದರ ಸಭೆ ನಡೆಸಿ ಪ್ರಕ್ರಿಯೆಗೆ ವೇಗ ನೀಡಲಾಗುತ್ತದೆ ಎಂದು ತಿಳಿಸಿದರು.

ಸಾವಿರಾರು ಕಥೆ, ಆಲೋಚನೆ, ಭಾವನೆಗಳನ್ನು ವ್ಯಕ್ತಪಡಿಸುವ ಶಕ್ತಿ ಚಿತ್ರಕಲೆಗಿದೆ. ಈ ಪರಂಪರೆ ಪುರಾತನ ಕಾಲದಿಂದಲೂ ಅಸ್ತಿತ್ವದಲ್ಲಿದೆ. ಕಲೆಗೆ ಮತ್ತು ಕಲಾವಿದರಿಗೆ ಗೌರವ ಸಲ್ಲಿಸಲು ಪ್ರತಿವರ್ಷ ಇಟಲಿಯ ಶ್ರೇಷ್ಠ ವರ್ಣಚಿತ್ರಕಾರ ಲಿಯೊನಾರ್ಡೊ ಡಾ ವಿನ್ಸಿಯವರ ಜನ್ಮದಿನವಾದ ಏಪ್ರಿಲ್ 15 ರಂದು ಪ್ರಪಂಚದಾದ್ಯಂತ ವಿಶ್ವ ಕಲಾ ದಿನವನ್ನು ಆಚರಿಸಲಾಗುತ್ತದೆ ಎಂದರು.ಲಿಯೊನಾರ್ಡೊ ಡಾ ವಿನ್ಸಿ ಒಬ್ಬ ವರ್ಣಚಿತ್ರಕಾರ, ಶಿಲ್ಪಿ, ವಾಸ್ತುಶಿಲ್ಪಿ, ಸಂಗೀತಗಾರ, ನುರಿತ ಮೆಕ್ಯಾನಿಕ್, ಎಂಜಿನಿಯರ್ ಮತ್ತು ವಿಜ್ಞಾನಿ. ಅವರು ತಮ್ಮ ಕಲೆಯಲ್ಲಿನ ಪ್ರಾವೀಣ್ಯತೆಯಿಂದಲೇ ಪ್ರಪಂಚದಾದ್ಯಂತ ಖ್ಯಾತಿಯನ್ನು ಪಡೆದವರು. ಇಂತಹ ಮಹಾನ್ ಕಲಾವಿದನ ಜನ್ಮ ದಿನದ ಸವಿ ನೆನಪಿಗೆ 2012 ರಲ್ಲಿ ವಿಶ್ವ ಕಲಾ ದಿನವನ್ನು ಆಚರಣೆಯನ್ನು ಪ್ರಾರಂಭಿಸಲಾಯಿತು ಎಂದು ತಿಳಿಸಿದರು. ಕಲೆ ಮನುಷ್ಯನ ಭಾವನಾತ್ಮಕ ಲಹರಿಯ ಕೊಡುಗೆ. ವ್ಯಕ್ತಿ ಹಾಗೂ ಸಮಾಜದ ಚೈತನ್ಯದ ಮಹತ್ವಪೂರ್ಣ ಕ್ರಿಯೆ. ಸಮಾಜದ ಪ್ರತಿನಿಧಿಯಾಗಿ ಕಲೆಯನ್ನು ಕಲಾವಿದ ಸೃಷ್ಟಿಸುತ್ತಾನೆ. ಕಲಾವಿದನ ವ್ಯಕ್ತಿತ್ವ ಕೂಡ ಈ ಸಮಾಜದಿಂದ ರೂಪುಗೊಳ್ಳುತ್ತದೆ. ಅಂತೆಯೇ ಕಲೆಯನ್ನು ಆಸ್ವಾದಿಸುವುದು ಈ ಸಮಾಜವೇ ಎಂಬುದು ಮಹತ್ವಪೂರ್ಣವಾದುದು ಎಂದರು.ಕಲೆಯು ಕಠಿಣ ಪರಿಶ್ರಮ, ಶ್ರದ್ಧೆ, ಏಕಾಗ್ರತೆ, ಸತತ ಪ್ರಯತ್ನ ಕೇಳುತ್ತದೆ. ಹೀಗೆ ಕಲೆಯನ್ನು ಒಲಿಸಿಕೊಂಡು ಈ ಕ್ಷೇತ್ರದಲ್ಲಿ ಸಾಧನೆ ಮಾಡಿದವರು ಹಲವರಿದ್ದಾರೆ. ಕಲೆ ಆಲೋಚನೆಗಳನ್ನು, ಭಾವನೆಗಳನ್ನು ವ್ಯಕ್ತಪಡಿಸುವ ಮಾಧ್ಯಮವಾಗಿದೆ ಎಂದು ತಿಳಿಸಿದರು.

ಸಾಹಿತಿ ಡಾ.ಸಂಗೇನಹಳ್ಳಿ ಅಶೋಕ್ ಕುಮಾರ್ ಮಾತನಾಡಿ, ಕಲಾವಿದರು ಸಕಾಲಕ್ಕೂ ಸಲ್ಲುತ್ತಾರೆ. ಕಾಲ ಕಾಲಕ್ಕೆ ಎದುರಾಗುವ ಎಲ್ಲ ಅಡ್ಡಿ ಆತಂಕಗಳನ್ನು ಎದುರಿಸಿ ಕಲೆಯನ್ನು ಗೆಲ್ಲಿಸುವ ಶಕ್ತಿ ಚಿತ್ರಕಲಾವಿದರಿಗೆ ಇದೆ ಎಂದರು.

ಎಐ ತಂತ್ರಜ್ಞಾನ ಕಲಾವಿದರ ಬದುಕು ಕಿತ್ತು ಕೊಳ್ಳುವ ಆತಂಕ ಸೃಷ್ಟಿಸಿದೆ. ಆದರೆ ಕ್ರಿಯಾಶೀಲತೆ, ಅಂತರಂಗದ ಅಭಿವ್ಯಕ್ತವನ್ನು ಚಿತ್ರ ರೂಪಕ್ಕೆ ತರುವ ಶಕ್ತಿ ಕಲಾವಿದರಿಗೆ ಮಾತ್ರ ಇದೆ ಎಂದು ತಿಳಿಸಿದರು.ಚಿತ್ರಕಲೆ ಒಂದು ಕೇವಲ ಕಲೆಯಾಗಿರದೆ ಅನೇಕ ಸಂಸ್ಕೃತಿ, ಸಮುದಾಯಗಳ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದೆ. ಕಲೆ ಮಾನವ ಸಂಸ್ಕೃತಿಯ ಅತ್ಯಗತ್ಯ ಭಾಗವಾಗಿದೆ ಮತ್ತು ಹಿಂದಿನಿಂದಲೂ ಭಾವನೆಗಳನ್ನು ವ್ಯಕ್ತಪಡಿಸಲು, ಸಂವಹನ ನಡೆಸಲು ಸುತ್ತಲಿನ ಪ್ರಪಂಚದ ಸೌಂದರ್ಯವನ್ನು ಸೆರೆ ಹಿಡಿಯಲು ಚಿತ್ರಕಲೆಯನ್ನೇ ಬಳಸಲಾಗುತ್ತಿತ್ತು. ಈ ಕಲೆ ಮಾತ್ರವಲ್ಲದೆ ಕಲಾವಿದರ ಕೊಡುಗೆಗಳು ಕೂಡಾ ನಮ್ಮ ಸಂಸ್ಕೃತಿಯನ್ನು ರೂಪಿಸುವಲ್ಲಿ ಮಹತ್ವದ ಪಾತ್ರವನ್ನು ಹೊಂದಿದೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಿ.ಎಂ. ಗುರುನಾಥ್ ಮಾತನಾಡಿ, ಚಿತ್ರಕಲೆಗೆ ತನ್ನದೇ ಆದ ಶಕ್ತಿಯಿದ್ದು ಎಲ್ಲರನ್ನು ಕ್ಷಣ ಮಾತ್ರದಲ್ಲಿ ತನ್ನತ್ತ ಸೆಳೆಯುತ್ತದೆ. ಎಲ್ಲರೂ ಸೇರುವುದು ಒಂದು ಕಲೆ. ಇದು ನಮ್ಮಲ್ಲ ಭಾವನೆ ಜತೆಗೆ ಗುಣಾತ್ಮಕ ಶಕ್ತಿ ತುಂಬಲಿದೆ ಎಂದು ತಿಳಿಸಿದರು.ಕಲೆಗೆ ಗೌರವ ವ್ಯಕ್ತಪಡಿಸಲು ವಿಶ್ವ ಕಲಾದಿನವನ್ನು ಆಚರಿಸಲಾಗುತ್ತಿದೆ. ವಿಶ್ವ ಕಲಾ ದಿನವು ಸಮಾಜದಲ್ಲಿ ಕಲೆಯ ಪ್ರಾಮುಖ್ಯತೆಯನ್ನು ಒತ್ತಿ ಹೇಳುವ ಗುರಿ ಹೊಂದಿದೆ. ಸಾಹಿತ್ಯ ಚಿತ್ರಕಲೆ ಒಂದಕ್ಕೊಂದು ಪೂರಕ. ಸಾಹಿತ್ಯದಲ್ಲಿ ಪುಟಗಟ್ಟಲೇ ಬರೆಯುವುದನ್ನು ಒಂದು ಚಿತ್ರದಲ್ಲಿ ಪ್ರತಿಬಿಂಬಿಸಲು ಸಾಧ್ಯ. ಭಾರತೀಯ ಶಿಲ್ಪಕಲೆ ಜಗದ್ವಿಖ್ಯಾತಿ ಪಡೆದಿದೆ. ಹಳೆ ಯದನ್ನು ಉಳಿಸಿಕೊಂಡು ಹೊಸ ಸೃಜನಶೀಲ ಕಲೆಯನ್ನು ಬೆಳೆಸಿ ಕೊಂಡು ಹೋಗುವುದು ಅವಶ್ಯ ಎಂದರು. ಚಿತ್ರಕಲಾವಿದ ಕ್ರಿಯೇಟಿವ್ ವೀರೇಶ್ ಮಾತನಾಡಿ, ಚಿತ್ರದಕಲಾವಿದರಿಗೆ ನಿರಂತರ ಅಧ್ಯಯನದ ಅವಶ್ಯಕತೆ ಹೆಚ್ಚಾಗಿದೆ. ನಮ್ಮ ಚಿತ್ರಗಳು ಜನಮಾನಸದಲ್ಲಿ ಉಳಿಯ ಬೇಕಾದರೆಅಧ್ಯಯನ,ಸಂಶೋಧನೆಯಿಂದ ಮಾತ್ರ ಸಾಧ್ಯ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಚಿತ್ರ ಕಲಾ ಕ್ಷೇತ್ರಕ್ಕೆ ಹೊಸಬರ ಆಗಮನ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಕಲಾವಿದರ ಕನಸಿನ ಆರ್ಟ್ ಗ್ಯಾಲರಿ ಆದಷ್ಟು ಬೇಗ ನಿರ್ಮಾಣ ಆದರೆ ಬಹಳಷ್ಟು ಅನುಕೂಲವಾಗಲಿದೆ. ನಗರದ ತರಾಸು ರಂಗಮಂದಿರದ ನವೀಕರಣ ಕಾರ್ಯ ಆರಂಭವಾಗಿದ್ದು, ಇದರ ಜತೆಯಲ್ಲೇ ಗ್ಯಾಲರಿ ಕಾರ್ಯ ನಡೆದರೆ ಉತ್ತಮ ಎಂದರು.ಚಿತ್ರಕಲಾವಿದ ದಾದಾಪೀರ್ ಇಳಿಸಂಜೆಯ ಕೋಟೆ ದೃಶ್ಯವನ್ನು ಬಿಡಿಸುವ ಮೂಲಕ ವಿದ್ಯಾರ್ಥಿಗಳಿಗೆ ಪ್ರಾತ್ಯಕ್ಷಿಕೆ ತೋರಿಸಿದರು. ರಂಗಕರ್ಮಿ ಕೆ.ಪಿ.ಎಂ.ಗಣೇಶಯ್ಯ, ಚಿತ್ರಕಲಾ ಸಿದ್ದಾಪುರ ಶಿವಕುಮಾರ್ ಇದ್ದರು.

## ಫಾಸ್ಟ್ ನ್ಯೂಸ್

### ಚಂದ್ರವಳ್ಳಿ ಕ್ರಾಸ್ ಹತ್ತಿರ ಬಸವ ಪುತ್ಥಳಿ ಪ್ರತಿಷ್ಠಾಪನೆ



» **ಚಿತ್ರದುರ್ಗ**

ವೀರಶೈವ ಲಿಂಗಾಯಿತ ಯುವ ವೇದಿಕೆಯಿಂದ ಚಂದ್ರವಳ್ಳಿ ಕ್ರಾಸ್ ಹತ್ತಿರ ಬಸವ ಪುತ್ಥಳಿಯನ್ನು ಮಂಗಳವಾರ ಪ್ರತಿಷ್ಠಾಪಿಸಲಾಯಿತು. ವೀರಶೈವ ಲಿಂಗಾಯಿತ ಯುವ ವೇದಿಕೆ ಅಧ್ಯಕ್ಷ ಹೆಚ್.ಎಂ.ಮಂಜುನಾಥ್ ಮಾತನಾಡಿ ಹನ್ನೆರಡನೆ ಶತಮಾನದ ಕ್ರಾಂತಿಕಾರಿ, ಭಕ್ತಿ ಭಂಡಾರಿ ಬಸವಣ್ಣನವರು ಅನುಭವ ಮಂಟಪದ ಮೂಲಕ ಮಹಿಳೆಯರಿಗೂ ಸಮಾನತೆ ಕಲ್ಪಿಸಿದರು. ಕಾಯಕವೆ ಕೈಲಾಸ ಎನ್ನುವುದು ಬಸವಣ್ಣನವರ ಧ್ಯೇಯವಾಗಿತ್ತು. ಅಂತಹ ಮಹಾನ್ ಪುರುಷನ ಆದರ್ಶ ತತ್ವಗಳನ್ನು ಪ್ರತಿಯೊಬ್ಬರೂ ಪಾಲಿಸಬೇಕಿದೆ ಎಂದರು. ಗೌರವಾಧ್ಯಕ್ಷ ಅಶೋಕ್, ಉಪಾಧ್ಯಕ್ಷ ಗಿರೀಶ್, ಕೆ.ಡಿ.ಪಿ.ಸದಸ್ಯ ನಾಗರಾಜ್, ಗಾರೆಹಟ್ಟಿ ವಿಜಯಕುಮಾರ್, ಕಾರ್ತಿಕ್, ರುದ್ರೇಶ್, ಮಂಜುನಾಥ್, ಶಿವಕುಮಾರ್, ಹನೀಸ್ ಅಜೀಮ್ ಇವರುಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

### ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ




» **ಹರಿಹರ**

ಹರಿಹರದ ಮರಿಯ ನಿವಾಸ ಶಾಲೆಯಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ 15 ದಿನಗಳ ಕಾಲ ಆಯೋಜಿಸಲಾಗಿದ್ದ ಮಕ್ಕಳ ಬೇಸಿಗೆ ಶಿಬಿರವು ಯಶಸ್ವಿಯಾಗಿ ಸಂಪನ್ನಗೊಂಡಿತು. ಶಿಬಿರದಲ್ಲಿ ನೂರಕ್ಕೂ ಹೆಚ್ಚು ಮಕ್ಕಳು ಉತ್ಸಾಹದಿಂದ ಪಾಲ್ಗೊಂಡಿದ್ದರು. ಯೋಗ, ಚಿತ್ರಕಲೆ, ನೃತ್ಯ ಮತ್ತು ಅಬಾಕಸ್ ಮುಂತಾದ ವಿವಿಧ ಚಟುವಟಿಕೆಗಳಲ್ಲಿ ಮಕ್ಕಳು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಶಿಬಿರದ ಸಮಾರೋಪ ಸಮಾರಂಭವು ಇತ್ತೀಚೆಗೆ ಶಾಲಾ ಆವರಣದಲ್ಲಿ ನಡೆಯಿತು.ಈ ಸಂದರ್ಭದಲ್ಲಿ ಆರೋಗ್ಯ ಮಾತೆಯ ದೇವಾಲಯದ ಸಹಾಯಕ ಗುರುಗಳಾದ ಫಾದರ್ ರಿಚರ್ಡ್ ಮಸ್ಕ್ ರೈನಸ್, ಬ್ರದರ್ ಅಭಿಲಾಶ್, ಮುಖ್ಯೋಪಾಧ್ಯಾಯಿನಿಯರಾದ ಸಿಸ್ಟರ್ ಪ್ರೀತಿ ಮತ್ತು ಸಿಸ್ಟರ್ ಆಲ್ಫೋ ನೇಸ ಅವರು ಮಕ್ಕಳಿಗೆ ಶುಭ ಹಾರೈಸಿದರು ಹಾಗೂ ಪ್ರಮಾಣಪತ್ರಗಳನ್ನು ವಿತರಿಸಿದರು.ಕಾರ್ಯಕ್ರಮದ ಆರಂಭದಲ್ಲಿ ಶಾಲೆಯ ಕಚೇರಿ ನಿರ್ವಾಹಕರಾದ ಡಿ. ಫ್ರಾನ್ಸಿಸ್ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಪ್ತರ್ಷಿ ಯೋಗಧಾರ ಸ್ಪೋರ್ಟ್ಸ್ ಅಕಾಡೆಮಿಯ ಅಧ್ಯಕ್ಷರೂ ಹಾಗೂ ಡಾಕ್ಟರೇಟ್ ಪುರಸ್ಕೃತರಾದ ಯೋಗ ಶಿಕ್ಷಕ ಕೆ. ಜೈಮುನಿ ಅವರು ಮಾತನಾಡಿ ಮಕ್ಕಳಿಗೆ ಯೋಗದ ಮಹತ್ವವನ್ನು ತಿಳಿಸಿದರು.ಸಮಾರೋಪ ಸಮಾರಂಭದ ವಿಶೇಷ ಆಕರ್ಷಣೆಯಾಗಿ ರಾಷ್ಟ್ರಮಟ್ಟದ ಯೋಗ ಪಟುಗಳಾದ ಕು. ನಯನ ಮತ್ತು ಗುರುಪ್ರಸಾದ್ ಅವರು ಮನೋಜ್ಞ ಯೋಗ ಪ್ರದರ್ಶನವನ್ನು ನೀಡಿದರು. ಶಿಕ್ಷಕಿ ಶ್ರೀಮತಿ ಸುಪ್ರಿಯ ಕಾರ್ಯಕ್ರಮವನ್ನು ನಿರೂಪಿಸಿದರು.

### ಉಪಲೋಕಾಯುಕ್ತಾ ಭೇಟಿ

» **ದಾವಣಗೆರೆ**

ನ್ಯಾಮಮೂರ್ತಿ ಹಾಗೂ ಉಪಲೋಕಾಯುಕ್ತರಾದ ಬಿ.ವೀರಪ್ಪ ಅವರು ಏಪ್ರಿಲ್ 22 ರಿಂದ 26 ರವರೆಗೆ ಐದು ದಿನಗಳ ಕಾಲ ದಾವಣಗೆರೆ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಏಪ್ರಿಲ್ 24 ರಂದು ಜಿಲ್ಲಾಧಿಕಾರಿಗಳ ಕಚೇರಿಯ ತುಂಗಭದ್ರಾ ಸಭಾಂಗಣದಲ್ಲಿ ಸಾರ್ವಜನಿಕರಿಂದ ನೇರವಾಗಿ ದೂರು ಅರ್ಜಿಗಳನ್ನು ಸ್ವೀಕರಿಸುವರು ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್.ಬಿ.ಇಟ್ನಾಳ್ ತಿಳಿಸಿದರು. ಮಂಗಳವಾರ(ಏ.15) ರಂದು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಉಪಲೋಕಾಯುಕ್ತರ ಭೇಟಿ ಹಿನ್ನಲೆಯಲ್ಲಿ ಆಯೋಜಿಸಲಾಗಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು. ಏಪ್ರಿಲ್ 23 ರಂದು ವಿವಿಧ ಸ್ಥಳಗಳ ವೀಕ್ಷಣೆ ಹಾಗೂ ಇಲಾಖೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುವರು. ಏ.24 ರಂದು ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆಯಿಂದ ಮ.1.30 ಹಾಗೂ ಮ.2.30 ರಿಂದ ಸಂಜೆ 5 ಗಂಟೆಯವರೆಗೆ ಸಾರ್ವಜನಿಕರಿಂದ ದೂರು ಹಾಗೂ ಅಹವಾಲು ಸ್ವೀಕರಿಸಿ ನೇರವಾಗಿ ವಿಚಾರಣೆ ನಡೆಸುವರು. ಏ.25 ರಂದು ವಿವಿಧ ಇಲಾಖೆಗಳಿಗೆ ಭೇಟಿ ನೀಡಿ ತುಂಗಭದ್ರಾ ಸಭಾಂಗಣದಲ್ಲಿ ಲೋಕಾಯುಕ್ತದಲ್ಲಿ ಬಾಕಿ ಇರುವ ಬಾಕಿ ಪ್ರಕರಣಗಳನ್ನು ದೂರುದಾರರ ಸಮಕ್ಷಮದಲ್ಲಿ ನೇರವಾಗಿ ವಿಚಾರಣೆ ನಡೆಸುವರು. ಸಾರ್ವಜನಿಕರು ಸರ್ಕಾರಿ ಇಲಾಖೆಗಳಲ್ಲಿ ಸಲ್ಲಿಸಿದ ಅರ್ಜಿಗಳನ್ನು ವಿಲೆಮಾಡದೇ ಬಾಕಿ ಇಟ್ಟಿರುವ ಬಗ್ಗೆ ಮತ್ತು ದುರಾಡಳಿತ, ಕರ್ತವ್ಯ ನಿರ್ವಹಣೆಯಲ್ಲಿ ವಿಫಲತೆ, ಯೋಜನೆಗಳು ಮತ್ತು ಸೌಲಭ್ಯಗಳನ್ನು ತಲುಪಿಸುವಲ್ಲಿ ವಿಫಲತೆ ಮತ್ತು ಅವ್ಯವಹಾರಕ್ಕೆ ಸಂಬಂಧಿಸಿದ ಅರ್ಜಿಗಳನ್ನು ಸಲ್ಲಿಸಬಹುದು.

# ಕೋಟೆನಗರಿಯಲ್ಲಿ ಅಕ್ಕ–ತಂಗಿಯರ ಭೇಟಿ

» **ಚಿತ್ರದುರ್ಗ**

ನಗರ ದೇವತೆಗಳಾದ ತ್ರಿಪುರ ಸುಂದರಿ ತಿಪ್ಪಿನಘಟ್ಟಮ್ಮ ಮತ್ತು ಬರಗೇರಮ್ಮ ದೇವಿ ಭೇಟಿ ಉತ್ಸವ ಮಂಗಳವಾರ ರಾತ್ರಿ ದೊಡ್ಡಪೇಟೆ ರಸ್ತೆಯಲ್ಲಿ ಸಂಭ್ರಮದಿಂದ ನಡೆಯಿತು.

ಗ್ರಾಮದೇವತೆಗಳಾದ ಶ್ರೀ ಬರಗೇರಮ್ಮ ಮತ್ತು ಶ್ರೀ ತ್ರಿಪುರ ಸುಂದರಿ ತಿಪ್ಪಿನಘಟ್ಟಮ್ಮ ದೇವಿಯರು ಅತ್ಯಂತ ಸುಂದರವಾಗಿ ಅಲಂಕಾರಗೊಂಡು ತಮ್ಮ ಮೂಲ ದೇವಸ್ಥಾನಗಳಿಂದ ಹೊರಡಲಿದ್ದಾರೆ. ನಗರದ ಪಶ್ಚಿಮ ಭಾಗದಲ್ಲಿ ನೆಲೆಸಿರುವ ಬರಗೇರಮ್ಮ ಹಾಗೂ ಪೂರ್ವ ಭಾಗದಲ್ಲಿ ನೆಲೆಸಿರುವ ತಿಪ್ಪಿನಘಟ್ಟಮ್ಮ ದೇವಿಯ ಭೇಟಿ ಉತ್ಸವಕ್ಕೆ ಅಪಾರಭಕ್ತರು ಸಾಕ್ಷಿಯಾದರು. ಸುಮಾರು ರಾತ್ರಿ 10.00 ರಿಂದ 10.30 ಕ್ಕೆ ಅಕ್ಕ–ತಂಗಿಯರು ಭೇಟಿಯಾದರು.

ಅಕ್ಕ–ತಂಗಿಯರ ಭೇಟಿ ಉತ್ಸವ ಎಂದೇ ಜನಜನಿತವಾಗಿರುವ ಈ ಉತ್ಸವ ಜಾನಪದ ಸೊಗಡಿನ ಹಿನ್ನೆಲೆ ಹೊಂದಿದೆ. ಸೋಮನ ಕುಣಿತ, ಡೊಳ್ಳು ಕುಣಿತ, ದೀವಟಿಗೆ ಧಾರಿಗಳು, ಉರುಮೆನಾದ. ತಮಟೆಗಳ ಸದ್ದು, ಡೊಳ್ಳುವಾದನಗಳು ಭೇಟಿಯ ಉತ್ಸವಕ್ಕೆ ಮೆರುಗು ನೀಡಿದ್ದವು. ಅತ್ಯಂತ ಸುಂದರವಾಗಿ ಪುಷ್ಪಾಲಂಕೃತಗೊಂಡಿದ್ದ ಅಕ್ಕ–ತಂಗಿಯರು ಪರಸ್ಪರ ಭೇಟಿಗಾಗಿ ತವಕಿಸುತ್ತಿರುವ ದೃಶ್ಯ ಸೊಗಸಾಗಿತ್ತು. ಈ ದೃಶ್ಯ ಭಕ್ತಾದಿಗಳನ್ನು ಪುಳಕಿತಗೊಳಿಸಿತು. ಅಕ್ಕ–ತಂಗಿಯವರು ಪರಸ್ಪರ ಬೇಟಿಯಾಗುತ್ತಿದ್ದಯೇ ಸುತ್ತ–ಮುತ್ತಲು ನೆರದಿದ್ದ ಭಕ್ತಾಧಿಗಳು ಸೀಳ್ಳು, ಕೇಕೆ, ಚಪ್ಪಾಳೆಯನ್ನು ಹೊಡೆಯುವುದರ



ಮೂಲಕ ತಮ್ಮ ಭಕ್ತಿಯನ್ನು ಪ್ರದರ್ಶನ ಮಾಡಿದರು.

ಸಿಂಗಾರಗೊಂಡ ಉತ್ಸವ ಮೂರ್ತಿಗಳ ಭವ್ಯ ಮೆರವಣಿಗೆ. ಜನ ಜಾತ್ರೆಯ ನಡುವೆ ರಾಜಬೀದಿಯಲ್ಲಿ ಅಕ್ಕ–ತಂಗಿಯರ ದಿವ್ಯ ಸಮಾಗಮ ಸಾಂಪ್ರದಾಯಿಕ ಅಪೂರ್ವ ಸಂಗಮ ಕಣ್ತುಂಬಿಕೊಂಡ ಭಕ್ತರಲ್ಲಿ ಪುನೀತ ಭಾವ. ಈ ದೃಶ್ಯಗಳು ಕಂಡು ಬಂದಿದ್ದು ಕೋಟೆನಾಡು ಚಿತ್ರದುರ್ಗ ನಗರದ ರಾಜಬೀದಿಯಲ್ಲಿ. ಹೌದು, ರಂಗಯ್ಯನ ಬಾಗಿಲು ಕಡೆಯಿಂದ ತ್ರಿಪುರ ಸುಂದರಿ ತಿಪ್ಪಿನಘಟ್ಟಮ್ಮ ದೇವಿ ವಯ್ಯಾರದಿ ಆಗಮಿಸಿದರೆ, ಇತ್ತ ಉಚ್ಚಂಗಿ ಎಲ್ಲಮ್ಮ ದೇಗುಲದ ಕಡೆಯಿಂದ ಬಂಗಾರಿ ಬರಗೇರಮ್ಮ ದೇವಿ ಬಿಂಕದಿ ಆಗಮಿಸಿದಳು. ಇನ್ನು ಈ ವಿಶೇಷ ಉತ್ಸವಕ್ಕೆ ಜಿಲ್ಲಾಡಳಿತ, ನಗರಸಭೆ, ಪೊಲೀಸ್ ಇಲಾಖೆ ಹಾಗೂ ದೇಗುಲ ಸಮಿತಿಗಳು ಈ ವರ್ಷ ವಿಶೇಷ ಸಿದ್ಧತೆಯನ್ನು ಮಾಡಿಕೊಂಡಿದ್ದವು. ರಾಜಬೀದಿ ಉದ್ದಕ್ಕೂ ವಿದ್ಯುತ್ ದೀಪಗಳ ಅಲಂಕಾರ ಮಾಡಲಾಗಿತ್ತು. ಸಾವಿರಾರು ಜನ ಭಕ್ತರು ಉತ್ಸವದಲ್ಲಿ ಭಾಗಿಯಾಗಿದ್ದರು. ಅಕ್ಕ–ತಂಗಿ ಭೇಟಿ ಉತ್ಸವಕ್ಕೆ ಸಾಕ್ಷಿಯಾಗಿ ಸಂಭ್ರಮಿಸಿದರು. ಅಕ್ಕ–ತಂಗಿ ಭೇಟಿ ಉತ್ಸವ ದುರ್ಗದ ಪರಂಪರೆಯ ಉತ್ಸವವಾಗಿದೆ. ದುರ್ಗದ ಹೆಣ್ಣುಮಕ್ಕಳು ಈ ಸಂದರ್ಭದಲ್ಲಿ ತವರಿಗೆ ಬಂದು ಅಕ್ಕ–ತಂಗಿ ಭೇಟಿ ಉತ್ಸವದಲ್ಲಿ ಪಾಲ್ಗೊಂಡು ಸಂಭ್ರಮಿಸುವುದು ವಿಶೇಷ.

ಒಟ್ಟಾರೆಯಾಗಿ ಕೋಟೆನಾಡು ಚಿತ್ರದುರ್ಗ ನಗರದಲ್ಲಿ ಅಕ್ಕ–ತಂಗಿಯರ ಅಪರೂಪದ ಸಂಗಮ ವೈಭವದಿಂದಲೇ ನಡೆಯಿತು. ಸಾವಿರಾರು ಜನ ಭಕ್ತರು ಅಪೂರ್ವ ಸಂಗಮ ಕಣ್ಣು ತುಂಬಿಕೊಂಡು ಪುನೀತ ಭಾವ ಅನುಭವಿಸಿದರು. ಸಾಂಪ್ರದಾಯಿಕ ಉತ್ಸವ ಮಾನವೀಯ ಸಂಬಂಧಗಳ ಬಗ್ಗೆ ವಿಶೇಷ ಸಂದೇಶ ರವಾನಿಸುವ ಮೂಲಕ ಜನರ ಮನ ಶುದ್ಧಗೊಳಿಸುವ ಮೂಲಕ ಸಾರ್ಥಕತೆ ಪಡೆಯಿತು. ಈ ಅಪರೂಪದ, ವೈಭವದ ಭೇಟಿ ಉತ್ಸವವನ್ನು ನೋಡಲು ನಗರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಿಂದ ಭಕ್ತರು ಆಗಮಿಸಿದ್ದರು.

ಜಾತ್ರೆಯ ಅಂಗವಾಗಿ ವಿವಿಧ ರೀತಿಯ ಅಂಗಡಿಗಳು ಬಂದಿದ್ದು, ಇದರಲ್ಲಿ ವಿವಿಧ ರೀತಿಯ ಧ್ವನಿ ಮಾಡುವ ಸಾಧನೆಗಳನ್ನು ಖರೀದಿಸಿದ ಯುವ ಜನತೆ ಅದರಿಂದ ಧ್ವನಿ ಮಾಡುವುದರಮೂಲಕಉಚ್ಚಂಗಿಯಲ್ಲಮ್ಮ ದೇವಾಲಯದಿಂದ ಅಕ್ಕ–ತಂಗಿಯರು ಭೇಟಿ ಮಾಡುವ ಸ್ಥಳದವರೆಗೂ ಹೋಗಿ ಬರುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಅಕ್ಕ–ತಂಗಿಯ ಭೇಟಿ ಸುಗಮವಾಗಿ ನಡೆಯಲು ಪೋಲಿಸ್ ಇಲಾಖೆ ಸಂಜೆಯಿಂದಲೇ ಶ್ರಮವನ್ನು ಹಾಕಿತ್ತು. ಪುರುಷ ಮತ್ತು ಮಹಿಳಾ ಪೋಲಿಸರು ಜನತೆಯನ್ನು ನಿಭಾಯಿಸುವಲ್ಲಿ ಹರ ಸಾಹಸ ಮಾಡಿದರು.ಶಾಸಕ ಕೆ.ಸಿ.ವಿರೇಂದ್ರ, ಮಾಜಿ ಶಾಸಕ ಎಸ್.ಕೆ.ಬಸವರಾಜನ್, ನಗರಸಭೆ ಸದಸ್ಯ ಭಾಸ್ಕರ್, ಮಾಜಿ ಅಧ್ಯಕ್ಷರಾದ ಸಿ.ಟಿ.ಕೃಷ್ಣಮೂರ್ತಿ, ಮಂಜುನಾಥ್ ಗೊಪ್ಪೆ, ಪೌರಾಯುಕ್ತೆ ರೇಣುಕಾ, ಕಾಂಗ್ರೆಸ್ ಓಬಿಸಿ ಘಟಕದ ಅಧ್ಯಕ್ಷ ಎನ್.ಡಿ.ಕುಮಾರ್ ಭಾಗವಹಿಸಿದ್ದರು.

## ಮೇಲುದುರ್ಗದಲ್ಲಿ ವೀರಭದ್ರಸ್ವಾಮಿ ಗುಗ್ಗುಳ

» **ಚಿತ್ರದುರ್ಗ**



ಮೇಲುದುರ್ಗದಲ್ಲಿ ನೆಲೆಸಿರುವ ಸಂಪಿಗೆ ಸಿದ್ದೇಶ್ವರ ಸ್ವಾಮಿ ಹಾಗೂ ವೀರಭದ್ರಸ್ವಾಮಿಯ ಗುಗ್ಗುಳ ಮತ್ತು ಕೆಂಡಾರ್ಚನೆಯನ್ನು ಪ್ರತಿ ಮೂರು ವರ್ಷಗಳಿಗೊಂದು ಸಾರಿ ನೆರವೇರಿಸುತ್ತಿದ್ದು ಸದರಿ ಗುಗ್ಗುಳ ಮತ್ತು ಕೆಂಡಾರ್ಚನೆಯ ಕಾರ್ಯಕ್ರಮವನ್ನುಏ.21ಹಾಗೂ 22 ರಂದು ನೆರವೇರಿಸಲಾಗುತ್ತದೆ ಎಂದು ಶ್ರೀ ಸಂಪಿಗೆ ಸಿದ್ದೇಶ್ವರ ಸೇವಾ ಸಮಿತಿಯ ಅಧ್ಯಕ್ಷ ಪಿ.ಎನ್.ಸಿದ್ದರಾಜು ತಿಳಿಸಿದ್ದಾರೆ.

ಏ. 21 ನೇ ಸೋಮವಾರ ರಾತ್ರಿ 8. ಗಂಟೆಯಿಂದ, ಗಂಗಾಪೂಜೆ, ಕಾಳಿಕಾದೇವಿ ಸ್ಥಾಪನೆ, ಕಂಕಣಧಾರಣೆ, ರುದ್ರಾಭಿಷೇಕ, ಬಿಲ್ವಾರ್ಚನೆ, ಶ್ರೀ ಅಮ್ಮನವರಿಗೆ ಕುಂಕುಮಾರ್ಚನೆ ರಾತ್ರಿ 11. ಗಂಟೆಗೆ ರುದ್ರಹೋಮ ಇತ್ಯಾದಿ ಕಾರ್ಯಕ್ರಮಗಳು ನಡೆಯಲಿವೆ. ಏ. 22 ನೇ ಮಂಗಳವಾರ ಬೆಳಗಿನ ಜಾವ 4.30 ಗಂಟೆಗೆ ಮಹಾ ಮಂಗಳಾರತಿ ನಂತರ ಬೆಳಿಗ್ಗೆ 5 ಗಂಟೆಯಿಂದ ಶ್ರೀ ಸಂಪಿಗೆ ಸಿದ್ದೇಶ್ವರ ದೇವಾಲಯದ ಮುಂಭಾಗದಲ್ಲಿ ಕೆಂಡಾರ್ಚನೆ ನಂತರ ಅಡ್ಡಪಲ್ಲಕ್ಕಿ ಉತ್ಸವ ನೆರವೇರಿಸಲಾಗುವುದು.

ಕೆಂಡಾರ್ಚನೆ ನೆರವೇರಿದ ನಂತರ ಶ್ರೀ ಸಂಪಿಗೆ ಸಿದ್ದೇಶ್ವರಸ್ವಾಮಿ ಹಾಗೂ ಶ್ರೀ ವೀರಭದ್ರಸ್ವಾಮಿಯವರ ಅಡ್ಡಪಲ್ಲಕ್ಕಿ ಉತ್ಸವವು ಗುಗ್ಗುಳ ಕೊಡಗಳ ಸಹಿತ ರಾಣೇಬೆನ್ನೂರಿನ ಶ್ರೀ ಬಸವಣ್ಣಪ್ಪನವರು ಹಾಗೂ ವೃಂದದವರಿಂದ ಶ್ರೀ ವೀರಭದ್ರಸ್ವಾಮಿಯವರ ವಚನಾಮೃತಗಳೊಂದಿಗೆ ಪುರುವಂತರು ಹಾಗೂ ಚಮ್ಮೇಳನ ದವರು, ಶ್ರೀ ಬ್ರಹ್ಮಲಿಂಗೇಶ್ವರ ಸಮಾಳ ಸಂಘ, ಹಾರಕನಾಳು ಮತ್ತು ನಾಣ್ಯಾಪುರ ಇವರ ಮುಂದಾಳತ್ವದಲ್ಲಿ ನಂದಿ ಧ್ವಜ ಕುಣಿತದೊಂದಿಗೆ ಮೇಲುದುರ್ಗದಿಂದ ಕೆಳಗಿಳಿದು ಶ್ರೀ ಗಾರೇಬಾಗಿಲು ಈಶ್ವರ ದೇವಾಲಯದ ಮುಂಭಾಗದಿಂದ ರಾಜ ಉತ್ಸವಾಂಬ ದೇವಾಲಯ, ದೊಡ್ಡಪೇಟೆ, ರಂಗಯ್ಯನಬಾಗಿಲು, ಬಸವಮಂಟಪ ರಸ್ತೆ, ಧರ್ಮಶಾಲಾ ರಸ್ತೆಯಲ್ಲಿರುವ ಅರಳಿಮರ ಮುಂಭಾಗದಿಂದ ಮೈಸೂರು ಬ್ಯಾಂಕ್ ವೃತ್ತ, ಪೂನಾ ಬೆಂಗಳೂರು ರಸ್ತೆ, ಸಂತೇಪೇಟೆಯಲ್ಲಿರುವ ಗಾಂಧಿವೃತ್ತ ಶ್ರೀ ನೀಲಕಂಠೇಶ್ವರ ದೇವಸ್ಥಾನ ಹಳೇ ಇಂಡಿಯನ್ ಬ್ಯಾಂಕ್ ಪಕ್ಕದಿಂದ ಆನೇಬಾಗಿಲು, ಚಿಕ್ಕಪೇಟೆ ಮೂಲಕ ಮೇಲುದುರ್ಗದಲ್ಲಿರುವ ದೇವಸ್ಥಾನ ಸೇರಲಿದೆ.

ಏ 21 ನೇ ಸೋಮವಾರ ರಾತ್ರಿ ದೇವಸ್ಥಾನದಲ್ಲಿ ತಂಗುವವರಿಗೆ ಪ್ರಸಾದ ವ್ಯವಸ್ಥೆ ಹಾಗೂ ಮಂಗಳವಾರ ಬೆಳಿಗ್ಗೆ 9 ಗಂಟೆಯಿಂದ ಸಾರ್ವಜನಿಕವಾಗಿ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ಸಕಲ ಭಕ್ತಾದಿಗಳು ಈ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಶ್ರೀ ಸ್ವಾಮಿಯ ಕೃಪಾಶೀರ್ವಾದಕ್ಕೆ ಪಾತ್ರರಾಗಲು ಕೋರಿದ್ದಾರೆ.

## ಹರಿಮತಿ ಚೌಡೇಶ್ವರಿ ಜಾತ್ರೋತ್ಸವ



» **ಚಿತ್ರದುರ್ಗ**

ಹೊಳಲ್ಕೆರೆ ಪಟ್ಟಣದ ಮಂಜುನಾಥ ಸ್ಕೂಲ್ ರೋಡ್‌ನಲ್ಲಿನ ಶ್ರೀ ಹರಿಮತಿ ಚೌಡೇಶ್ವರಿ ಅಮ್ಮನವರ ಜೀರ್ಣೋದ್ಧಾರ ಟ್ರಸ್ಟ್‌ವತಿಯಿಂದ ಶ್ರೀ ಹರಿಮತಿ ಚೌಡೇಶ್ವರಿ ಅಮ್ಮನವರ ಜಾತ್ರೋತ್ಸವವನ್ನು ಸಂಪನ್ನವಾಗಿ ಸಾವಿರಾರು ಭಕ್ತರ ನಡುವೆ ಜರುಗಿತು.ಜಾತ್ರೋತ್ಸವದ ಅಂಗವಾಗಿ ಏ. 14 ರಂದು ಅಮ್ಮನವರು ಮಧು ಒಣಗಿತ್ತಿ ಕಾರ್ಯಕ್ರಮ, ಏ. 15 ರಂದು ಗಂಗಾ ಪೂಜೆ ಪೂಜೆಯ ನಂತರ ಕೆಂಡಾರ್ಚನೆ ನೇರವೇರಿದ್ದು, ಆಗಮಿಸಿದ ಭಕ್ತಾದಿಗಳಿಗೆಲ್ಲ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಸಲಾಯಿತು.

ಇದೇ ಸಮಯದಲ್ಲಿ ಶ್ರೀ ಹರಿಮತಿ ಚೌಡೇಶ್ವರಿ ಅಮ್ಮನವರ ಜೀರ್ಣೋದ್ಧಾರ ಟ್ರಸ್ಟ್ ಅಧ್ಯಕ್ಷರಾದ ಎಂ ಸತೀಶ್ ಕುಮಾರ್ ಹಾಜರಿದ್ದು ಮಾತನಾಡಿದ ಅವರು ಈ ಅಮ್ಮನವರಲ್ಲಿ ಆಗಮಿಸುವ ಭಕ್ತಾಧಿಗಳು ತಮ್ಮ ಇಷ್ಟಾರ್ಥಗಳನ್ನು ದೇವಿಯಲ್ಲಿ ಅರ್ಪಿಸುವುದರ ಮೂಲಕ ಈಡೇರಿಸಿಕೊಳ್ಳಬಹುದಾಗಿದೆ, ಇದ್ದಲ್ಲದೆ ಇಲ್ಲಿ ಮಾಟ ಮದ್ದು ಭೂತ ಪಿಶಾಚಿ, ಪೀಡೆಗಳನ್ನು ಬಗೆಹರಿಸಲಿದ್ದಾರೆ. ಇದಕ್ಕೆ ಭಕ್ತಾಧಿಗಳಿಂದ ಹಣವನ್ನು ಪಡೆಯುವುದಿಲ್ಲ ಇದರ ಅಭೀವೃದ್ಧಿಗೆ ಸರ್ಕಾರದ ಅನುಗ್ರಹ ಅಗತ್ಯ ಇದೆ ಈ ಅಮ್ಮನವರಿಂದ ಬಹಳಷ್ಟು ಜನ ಓಳ್ಳೆಯದನ್ನು ಅನುಭವಿಸಿದ್ದಾರೆ.ಅಮ್ಮನವರ ಹೋಮ ಹವನ ಪೂಜೆಯನ್ನು ವೇದ ಬ್ರಹ್ಮ ಪುರೋಹಿತ ಪುನಿತ್ ಶಾಸ್ತ್ರಿಜಿಯವರು ನೆರವೇರಿಸಿದರು. ಈ ಸಂದರ್ಭದಲ್ಲಿ ಟ್ರಸ್ಟ್ ಸದಸ್ಯರಾದ ಪೂಜಾರ್ ಕಾಳ್ಯ ನಾಯಕ್ ಹೀರಾ ನಾಯಕ್ ಮಂಜುನಾಥ್ ಶಿವಾನಂದಪ್ಪ ಆನಂದ್ ಮಹೇಶ್ ಇನ್ನೂ ಇತರರು ಭಾಗವಹಿಸಿದ್ದರು.

## ಶ್ರೀಪಾತಲಿಂಗೇಶ್ವರಸ್ವಾಮಿ ಗರ್ಭಗುಡಿ ಪುನರ್ ನಿರ್ಮಾಣಕ್ಕೆ ನೆರವಿಗಾಗಿ ಪ್ರವಾಸ

» **ಚಳ್ಳಕೆರೆ**

ತಾಲ್ಲೂಕಿನ ಪರಶುರಾಮಪುರ ಹೋಬಳಿಯ ಚನ್ನಮ್ಮನಾಗತಿಹಳ್ಳಿಯಲ್ಲಿ ಶ್ರೀಪಾತಲಿಂಗೇಶ್ವರಸ್ವಾಮಿಯ ಗರ್ಭಗುಡಿ ಶಿಥಿಲಗೊಂಡ ಹಿನ್ನೆಲೆಯಲ್ಲಿ ಗರ್ಭಗುಡಿಯ ಪುನರ್ ನಿರ್ಮಾಣಕ್ಕಾಗಿ ದೇವಸ್ಥಾನ ಆಡಳಿತ ಮಂಡಳಿ ನಿರ್ಧರಿಸಿದ್ದು, ಭಕ್ತಾಧಿಗಳಿಂದ ದೇಣಿಗೆ ಸಂಗ್ರಹಿಸಿ ಗರ್ಭಗುಡಿ ನಿರ್ಮಿಸಲು ತೀರ್ಮಾನ ಕೈಗೊಳ್ಳಲಾಗಿದೆ ಎಂದು ದೇವಸ್ಥಾನ ಆಡಳಿತ ಮಂಡಳಿ ಅಧ್ಯಕ್ಷ ಆರ್.ಮಲ್ಲಯ್ಯ ತಿಳಿಸಿದರು.

ಅವರು, ಪ್ರವಾಸಿಮಂದಿರದಲ್ಲಿ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಗರ್ಭಗುಡಿಯ ಪುನಶ್ಚೇತನ ಕುರಿತಂತೆ ಗೊರವಿನಕೆರೆ ವಂಶಸ್ಥರೊಡನೆ ಚರ್ಚೆ



ನಡೆಸಿದ್ದು ಎಲ್ಲರೂ ಸಹಕಾರ ನೀಡುವ ಭರವಸೆ ನೀಡಿದ್ಧಾರೆಂದರು. ಕಾರ್ಯದರ್ಶಿ ಕರೀಕೆರೆ ನಾಗರಾಜು ಮಾತನಾಡಿ, ಗರ್ಭಗುಡಿ ಪುನರ್ ನಿರ್ಮಾಣಕ್ಕೆ ಈಗಾಗಲೇ ಗೊರವಿಕೆರೆ ವಂಶಸ್ಥರು ಆರ್ಥಿಕ ನೆರವು ನೀಡಿದ್ದು ಇನ್ನೂ ಹೆಚ್ಚಿನ ಹಣ ಅವಶ್ಯಕತೆ ಇದ್ದು, ಏ.18ರಿಂದ20ತನಕ ಸಮುದಾಯದ ಮುಖಂಡರು ಪ್ರವಾಸ ನಡೆಸಿ ಹಣ ಸಂಗ್ರಹಿಸುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಪಿಡಿಒ ವೇದಮೂರ್ತಿ, ಶಿಕ್ಷಕ ತಿಪ್ಪೇಸ್ವಾಮಿ, ದೊಡ್ಡೇರಿಕೆಂಚಣ್ಣ, ಜಡೇಕುಂಟೆಶಿವಣ್ಣ, ಗೊಲ್ಲಹಳ್ಳಿನಿಂಗಣ್ಣ ಮುಂತಾದವರು ಉಪಸ್ಥಿತರಿದ್ದರು.

**ಪ್ರಮುಖ ಸುದ್ದಿ**

# ಕಾಂಗ್ರೆಸ್ಸಿಂದ ಕೇಂದ್ರ ಸರ್ಕಾರದ ವಿರುದ್ಧ ಜನಾಕ್ರೋಶ ಯಾತ್ರೆ

» **ಚಿತ್ರದುರ್ಗ**


ರಾಜ್ಯ ಬಜೆಪಿ ಘಟಕವೂ ರಾಜ್ಯ ಸರ್ಕಾರ ಬೆಲೆ ಏರಿಕೆ ಮಾಡಿರುವ ಬಗ್ಗೆ ನಡೆಸುತ್ತಿರುವ ಜನಾಕ್ರೋಶ ಯಾತ್ರೆಯನ್ನು ಕೇಂದ್ರ ಸರ್ಕಾರದ ಬೆಲೆ ಏರಿಕೆ, ರಾಜ್ಯಕ್ಕೆ ನೀಡುವ ತೆರಿಗೆ ಹಣದಲ್ಲಿ ಮೋಸ ಸೇರಿದಂತೆ ವಿವಿಧ ದರ ಏರಿಕೆಯ ಬಗ್ಗೆ ಕೇಂದ್ರದ ವಿರುದ್ಧ ಜನಾಕ್ರೋಶ ಯಾತ್ರೆಯನ್ನು ನಡೆಸುವಂತೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಮಾಧ್ಯಮ ವಕ್ತಾರ, ಚಿತ್ರದುರ್ಗ ಜಿಲ್ಲಾ ಉಸ್ತುವಾರಿಗಳಾದ ಜಿ ಬಿ ಬಾಲಕೃಷ್ಣ ಸ್ವಾಮಿ ಯಾದವ್ ರಾಜ್ಯ ಬಿಜೆಪಿ ಘಟಕದ ಪದಾಧಿಕಾರಿಗಳಿಗೆ ಟಾಂಗ್ ನೀಡಿದ್ದಾರೆ.

ಚಿತ್ರದುರ್ಗ ನಗರದ ಜಿಲ್ಲಾ ಕಾಂಗ್ರೆಸ್ ಸಮಿತಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರದಲ್ಲಿ ಕಳೆದ 14 ವರ್ಷದಿಂದ ಅಧಿಕಾರವನ್ನು ನಡೆಸುತ್ತಿರುವ ಬಿಜೆಪಿ ಪಕ್ಷ ದಿನ ನಿತ್ಯದ ಬೆಲೆಗಳನ್ನು ಏರಿಸುವುದರ ಮೂಲಕ ಬಡ ಹಾಗೂ ಮಧ್ಯಮ ವರ್ಗದವರಿಗೆ ತೊಂದರೆಯನ್ನು ನೀಡಿದೆ, ನಮ್ಮ ಯುಪಿಎ ಸರ್ಕಾರದ ಅವಧಿಯಲ್ಲಿ ಬೆಲೆಗಳು ಸ್ಥಿರವಾಗಿದ್ದವು ತದ ನಂತರ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರದಲ್ಲಿ ಬೆಲೆಗಳು ಏರಿಕೆಯಾಗಿದೆ. ಇದರಿಂದ ಜನತೆ



ಬದುಕನ್ನು ನಡೆಸುವುದು ಕಷ್ಟವಾಗುತ್ತಿದೆ. ಮೋದಿ ಸರ್ಕಾರದ ದುರಾಡಳಿತದಿಂದ ಬೆಲೆ ಏರಿಕೆಯು ದೇಶದ ಜನರನ್ನು ಹಿಂಡಿ ಹಿಪ್ಪೆ, ಕಾಯಿ ಮಾಡಿದೆ. ಅಚ್ಛೇ ದಿನ್ ಎಂದು ಬೊಗಳೆ ಬಿಡುತ್ತಿರುವ ಮೋದಿ. ಭಾರತ 2030ರೊಳಗೆ 7 ಬಿಲಿಯನ್ ಡಾಲರ್ ಆರ್ಥಿಕತೆ ತಲುಪುತ್ತದೆ ಎಂದು ಹೇಳಿ ದೇಶದ ಆರ್ಥಿಕ ಬೆಳವಣಿಗೆಯನ್ನು 6.5%ಗೆ ಕುಸಿಯುವಂತೆ ಮಾಡಿದೆ. 2014ರಲ್ಲಿ ಮೋದಿ ಅಧಿಕಾರಕ್ಕೆ ಬಂದರೆ ಒಂದು ಡಾಲರ್ ಬೆಲೆಯನ್ನು 1 ರೂಪಾಯಿಗೆ ತರುವುದಾಗಿ ಹೇಳಿ ಸತತ 7 ವರ್ಷಗಳ ಕಾಲ ಭಾರತೀಯ ರೂಪಾಯಿ ಮೌಲ್ಯವನ್ನು ಕಳೆದುಕೊಂಡು ಈ ವರ್ಷವೂ ಯುಎಸ್ ಡಾಲರ್‌ಗೆ 86.35 ರೂ. ಕುಸಿದಿದೆ ಎಂದು ಆರೋಪಿಸಿದರು.

ಮೋದಿ ಸರ್ಕಾರ 2014ರಲ್ಲಿ 55 ಲಕ್ಷ ಕೋಟಿ ಇದ್ದ ದೇಶದ ಸಾಲವನ್ನು 205 ಲಕ್ಷ ಕೋಟಿಗೆ ಹೆಚ್ಚಿಸಿ ಪ್ರತಿಯೊಬ್ಬ ಪ್ರಜೆಯ ಮೇಲೆ ಸರಾಸರಿ ಸಾಲ ಸುಮಾರು 1.5 ಲಕ್ಷ ರೂ ಹೊರಿಸಿದೆ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯೇರಿಸಿ ಜನರ ಜೇಬಿಗೆ ಕತ್ತರಿ ಹಾಕಿದ ಕೇಂದ್ರ ಬಿಜೆಪಿ ಸರ್ಕಾರ. ಕಳೆದ 6 ವರ್ಷಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆಯನ್ನು ಶೇ. 307ರಷ್ಟು ಏರಿಕೆ ಮಾಡಿ ಬಡವರ ಹೊಟ್ಟೆ ಮೇಲೆ ಹೊಡೆಯುತ್ತಿದೆ. 2013ರಲ್ಲಿ ಪೆಟ್ರೋಲ್ ಮತ್ತು ಡಿಸೇಲ್ ಮೇಲಿನ ತೆರಿಗೆಯಿಂದ ಕೇಂದ್ರ ಸರ್ಕಾರ 52,537 ಕೋಟೆ ರೂ. ಇಂದ 2019ಕ್ಕೆ 2.13 ಲಕ್ಷ ಕೋಟಿ ರೂ. ಸಂಗ್ರಹಣೆಯಿಂದ 459% ಹೆಚ್ಚಾಗಿದೆ. 2024 ಅಕ್ಟೋಬರ್‌ನಲ್ಲಿ ಗ್ರಾಹಕ ಬೆಲೆ ಹಣದುಬ್ಬರ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ 6% ಗಡಿಯನ್ನು ದಾಟಿ 14–ತಿಂಗಳ ಗರಿಷ್ಠ 6.2% ಕ್ಕೆ ತಲುಪಿದೆ. ಆಹಾರ ಹಣದುಬ್ಬರವು 10.9% ಕ್ಕೆ ಹೆಚ್ಚಾಗಿದೆ. ಕೇಂದ್ರ ಸರ್ಕಾರದ ದುರಾಡಳಿತದಿಂದ ಹೆಚ್ಚಾಗುತ್ತಿರುವ ಹಣದುಬ್ಬರದ ಪರಿಣಾಮವು ಜನರು ಅಗತ್ಯ ವಸ್ತುಗಳ ಖರೀದಿಯನ್ನು ಕಡಿಮೆ ಮಾಡುತ್ತಿರುವುದರಿಂದ ಖಾಸಗಿ ಬಳಕೆಯು ಭಾರತದ ಜಿಡಿಪಿಗೆ 2022 ರಲ್ಲಿ 58.1% ರಿಂದ 2024ರಲ್ಲಿ 55.8%ಗೆ ಕುಸಿದಿದೆ. ಭಾರತದ ಒಟ್ಟು 143 ಕೋಟಿ ಜನಸಂಖ್ಯೆಯಲ್ಲಿ 100 ಕೋಟಿ ಜನರಲ್ಲಿ ಖರೀದಿಸುವ ಸಾಮರ್ಥ್ಯದ ಕೊರತೆಯಿದೆ ಎಂದು ಬ್ಲೂಮ್ ವೆಂಚರ್ಸ್ ವರದಿ ಮಾಡಿದೆ ಎಂದರು. ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಎಂ ಕೆ ತಾಜ್‌ಪೀರ್ ಮಾತನಾಡಿ, ಬಿಜೆಪಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಜನಾಕ್ರೋಶ ಯಾತ್ರೆಯನ್ನು ನಡೆಸುತ್ತಿದ್ದಿ ಇದರ ವಿರುದ್ಧ ಕಾಂಗ್ರೆಸ್ ಪಕ್ಷವೂ ಕೇಂದ್ರ ಸರ್ಕಾರದ ವಿರುದ್ಧ ಜನಾಕ್ರೋಶ ಯಾತ್ರೆಯನ್ನು ನಡೆಸಲು ಉದ್ದೇಶಿಸಿದೆ, ಕೇಂದ್ರದ ವಿರುದ್ಧ ಏ. 17 ರಂದು ಬೆಂಗಳೂರಿನ ಫ್ರೀಡಂ ಪಾರ್ಕನಲ್ಲಿ ಹೋರಾಟವನ್ನು ನಡೆಸಲಾಗುವುದು ಇದರಲ್ಲಿ ಚಿತ್ರದುರ್ಗದ ಆರು ತಾಲ್ಲೂಕಿನ ವಿವಿಧ ಘಟಕಗಳ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದರು.ಏ. 19 ರಂದು ಚಿತ್ರದುರ್ಗಕ್ಕೆ ಜಿ.ಪಂ. ತಾ.ಪಂ ಚುನಾವಣೆಯ ಹಿನ್ನಲೆಯಲ್ಲಿ ಕೆಪಿಸಿಸಿ ಕಾರ್ಯದರ್ಶಿಗಳಾದ ಚಂದ್ರಶೇಖರ್ ಆಗಮಿಸಲಿದ್ದಾರೆ ಇವರ ಬಳಿ ಜಿ.ಪಂ. ತಾ.ಪಂ. ಮಾಜಿ ಸದಸ್ಯರು ಅಭ್ಯರ್ಥಿಗಳಾಗುವವರ ಜೋತೆಯಲ್ಲಿ ಸಮಾಲೋಚನೆಯನ್ನು ನಡೆಸಲಿದ್ದಾರೆ ಎಂದ ಅವರು ಸರ್ಕಾರದ ನಡೆ ಕಾರ್ಯಕರ್ತರ ಕಡೆಗೆ ಎಂಬ ಕಾರ್ಯಕ್ರಮದಲ್ಲಿ ಈಗಾಗಲೇ ಮೊಳಕಾಲ್ಮೂರು, ಚಳ್ಳಕೆರೆ, ಹಿರಿಯೂರು ತಾಲ್ಲೂಕುಗಳಲ್ಲಿ ನಡೆದಿದ್ದು, ಉಳಿದ ಚಿತ್ರದುರ್ಗ, ಹೊಳಲ್ಕೆರೆ ಹಾಗೂ ಹೊಸದುರ್ಗ ತಾಲ್ಲೂಕುಗಳಲ್ಲಿ ಮುಂದಿನ ದಿನದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಆಯಾ ತಾಲ್ಲೂಕಿನ ಶಾಸಕರ ನೇತೃತ್ವದಲ್ಲಿ ಸಭೆಗಳನ್ನು ನಡೆಸಲಾಗುವುದೆಂದರು.



# ಸಿರಿವಂತನಾಗದಿದ್ದರೂ.. ಸೋಮಾರಿಯಾಗಬೇಡ

ಬದುಕೆಂದರೆ ನಿರಂತರ ಭೋರ್ಗರೆವ ಜಲಪಾತ ದಂತಿರಬೇಕು ಆಗಲೇ ಅದರ ಸುಂದರತೆಯ ಅನಾವರಣ ಆಗೋದು, ಅದೇ ನಿಂತ ನೀರಿನ ತರಹ ತಟಸ್ಥವಾದರೆ ಯಾವುದೇ ಉಪಯೋಗಕ್ಕೂ ಬರದಂತಾಗುತ್ತದೆ ಮತ್ತು ನೋಡಲಿಕ್ಕೂ ಸುಂದರವಾಗಿ ಕಾಣುವುದಿಲ್ಲ ಅದಕ್ಕೆ ಹಿರಿಯರು ಹೇಳುತ್ತಾರೆ ಮಲಗೇ ಇದ್ದರೆ ಸಾವು, ಕುಳಿತೇ ಇದ್ದರೆ ರೋಗ, ನಿಂತೆ ಇದ್ದರೆ ಶಿಕ್ಷೆ, ನಡೆದಾಡುವುದೇ ಬದುಕು ಎಂದು ಅದೆಷ್ಟು ಸತ್ಯ ಅಲ್ಲವೇ. ಈಗಿನ ಕಾಲದಲ್ಲಿ ಬಹುಮಂದಿ ಸೋಮಾರಿಗಳಾಗಿ ಇನ್ನೊಬ್ಬರು ದುಡಿದ ಹಣದಲ್ಲಿಯೇ ಅವರ ಅಧೀನದಲ್ಲಿ, ಅವಲಂಬಿತರಾಗಿ, ಯಾವುದೇ ನಾಚಿಕೆಯಿಲ್ಲದೆ ಬದುಕುವವರನ್ನು ನಾವು ಸರ್ವೇಸಾಮಾನ್ಯವಾಗಿ ನೋಡಿಯೇ ಇರುತ್ತೇವೆ. ಆದರೆ ಹಿಂದಿನ ಕಾಲದವರು ಹಾಗಿರಲಿಲ್ಲ ಅವರು "ದುಡಿಮೆಯೇ ದುಡ್ಡಿನ ತಾಯಿ", "ಕೈ ಕೆಸರಾದರೆ ಬಾಯಿ ಮೊಸರು" ಎಂದು ನಂಬಿ ನಡೆದವರು ಸುಖಾಸುಮ್ಮನೆ ಮತ್ತು ಅನಾಯಾಸವಾಗಿ ಏನಾದರೂ ಸಿಕ್ಕರೆ ಒಲ್ಲೆ ಎಂಬುವ ಜಾಯಮಾನ ಹೊಂದಿದವರಾಗಿದ್ದರು. ಈಗ ಮನೆಗೊಬ್ಬ, ಹತ್ತು ಜನಕ್ಕಿಬ್ಬರು ಅಥವಾ ಅದಕ್ಕೂ ಹೆಚ್ಚೆನಿಸುವಷ್ಟು ಸೋಮಾರಿ ಎಂಬುವ ಅಂಗವಿಕಲರಾಗಿದ್ದಾರೆ ಮತ್ತು "ವ್ಯಾಪಾರ ಮಾಡಲು ಧೈರ್ಯವಿಲ್ಲ", "ದುಡಿಮೆ ಮಾಡಲು ಮನಸ್ಸಿಲ್ಲ" ಎಂಬುವ ರೀತಿ ಕುಳಿತಲ್ಲೇ ಬದುಕು ಸಾಗಿಸುತ್ತಿದ್ದಾರೆ. ಆದಕಾರಣ ಗುಜರಾತ್, ರಾಜಸ್ಥಾನದಿಂದ ವ್ಯಾಪಾರ ಮಾಡಲು ಮತ್ತು ಯುಪಿ, ಬಿಹಾರ ಹಾಗೂ ಅನ್ಯ ರಾಜ್ಯದಿಂದ ಕೆಲಸ ಮಾಡಲು ಬಂದು ತುಂಬಿ ತುಳುಕಾಡುವಂತಾಗಿದೆ ಈ ನಮ್ಮ ಕರುನಾಡು. ಮೊದಮೊದಲು ಕೇವಲ ರಾಜಧಾನಿ ಬೆಂಗಳೂರಿನಲ್ಲಿ ಮಾತ್ರ ಕಾಣಸಿಗುತ್ತಿದ್ದ ಅನ್ಯರಾಜ್ಯದ ಕೆಲಸಗಾರರು, ಇದೀಗ ಜಿಲ್ಲೆ-ಜಿಲ್ಲೆಯಲ್ಲಿಯೇ ಏಕೆ ಹಳ್ಳಿಹಳ್ಳಿಯಲ್ಲೂ ಇತ್ತೀಚೆಗೆ ಕಾಣಸಿಗುತ್ತಿದ್ದಾರೆ ಅಲ್ಲದೆ ಅವರಿಗೆ ನಮ್ಮ ಭಾಷೆ ಕಲಿಸುವ ಬದಲು ನಾವುಗಳೇ ಅವರಿಗೆ ಮಾರ್ಪಟ್ಟು ಅವರ ಜೊತೆ ವ್ಯವಹರಿಸಲು ಅವರ ಹಿಂದಿ ಭಾಷೆಯಲ್ಲಿಯೇ ಮಾತಾಡಬೇಕಾಗಿದೆ.

ನಾನು ಮೊದಲು ಕಂಡ ತುಂಬಾ ದೊಡ್ಡ ಸೋಮಾರಿ ಎಂದರೆ ನನ್ನ ಎರಡನೇ ಭಾವ. ಆತನ ದೇಹ ದಡೂತಿ ಆಕಾರದಿಂದ ರಾಕ್ಷಸ ರೂಪಿಯಾಗಿದ್ದರು ಹುಟ್ಟು ಸೋಮಾರಿ, ಆತ ಕೆಲವೊಮ್ಮೆ ನನ್ನ ದುಡಿಮೆಯಲ್ಲಿ ಏನಾದರೂ ಸ್ವಲ್ಪ ಖರ್ಚಿಗೆ ಕೇಳಿದರೆ ನಾನು ಸುತರಾಂ ಒಪ್ಪುತ್ತಿರಲಿಲ್ಲ. ಏಕೆಂದರೆ, ಬರಡುಗಲ್ಲಿನ ಮೇಲೆ ಬಿತ್ತನೆ ಮಾಡುವುದರಿಂದ ಪ್ರಯೋಜನವೇನು ಮತ್ತು ಸೋಮಾರಿಗೆ ಕೊಟ್ಟು ಬೆಳೆಸುವುದರಿಂದ ಸೋಮಾರಿತನವನ್ನು ನೀರುಣಿಸಿ ಬೆಳೆಸಿದಂತಾಗುತ್ತದೆ ಅಲ್ಲದೆ ಆ "ಸೋಮಾರಿ ದೇಶಕ್ಕೆ ಮಾರಕ ಮತ್ತು ಬೊಕ್ಕಸಕ್ಕೆ ಗೆದ್ದಲು ಹಾಗೂ ಭೂಮಿಗೆ ಭಾರ" ಎಂಬುವುದೇ ನನ್ನ ಅನಿಸಿಕೆ.

ಆದರೆ, ನಮ್ಮ ತಂದೆ ಪರಿಶ್ರಮದಿಂದಲೇ ಫಲ ಸಿಗುತ್ತದೆ ಎಂದು ನಂಬಿ ನಡೆದವರು ನನ್ನ ತಂದೆ ತುಂಬಾ ಕಷ್ಟ ಜೀವಿ ಎಂದು ನಮ್ಮ ಊರಿನಲ್ಲಿ ತುಂಬಾ ಹೆಸರುವಾಸಿಯಾಗಿದ್ದರು ಅಲ್ಲದೆ ಅವರು ಯಾವುದೇ ಕೆಲಸವನ್ನಾಗಲಿ ಅಚ್ಚುಕಟ್ಟಾಗಿ ಮಾಡಿ ಎಲ್ಲರೂ ಪ್ರಶಂಸೆ ಪಡುವ ಹಾಗೆ ಅವರು ಕೆಲಸ ಮಾಡುತ್ತಿದ್ದರು. ಅವರ ಕೆಲಸ ಮಾಡುತ್ತಿದ್ದ ವಿಶೇಷ ಗುಣಗಳನ್ನು ಅವರ ಜೊತೆ ಕೆಲಸ ಮಾಡಿದವರು ಈಗಲೂ ನೆನೆಸುತ್ತಾರೆ ಮತ್ತು ಕೊಂಡಾಡುತ್ತಾರೆ.

ಮನೆಯಲ್ಲಿ ಕಡುಬಡತನ ಇದ್ದರೂ ತನ್ನ ರಟ್ಟೆ ಬಲ ನಂಬಿ ಬದುಕಿದವರು ನನ್ನ ತಂದೆ, ಊರಿನ ಜನರು ಹನುಮಣ್ಣ ನೀನು ಇಬ್ಬರು ಮಕ್ಕಳನ್ನು ಓದಿಸು ಮತ್ತು ಇನ್ನಿಬ್ಬರನ್ನು ಹೊಲದಲ್ಲಿ ಕೆಲಸಕ್ಕೆ ನಿನ್ನ ಸಹಾಯಕ್ಕಾಗಿ ಬಳಸಿಕೋ ಎಂದು ಉಪದೇಶ ಮಾಡಿದರೂ..... ಅವರಿಗೆ; ಇಲ್ಲ ಇಲ್ಲ ಈಗ ಇಬ್ಬರಿಗೆ ಓದಿಸಿ, ಇನ್ನಿಬ್ಬರಿಗೆ ಓದಿಸದಿದ್ದರೆ ಮುಂದೆ ಅವರು ದೊಡ್ಡವರಾದಾಗ ನನ್ನನ್ನು ಕುರಿತು, ನಮ್ಮನ್ನೇಕೆ ದಡ್ಡವರನ್ನಾಗಿ ಮಾಡಿದೆಯಲ್ಲ ಅಪ್ಪ ಎಂದು ಅವರು ಕೇಳಬಹುದು ಅಂತಹ ಅನ್ಯಾಯ ಮಾಡಲಾರೆ ಎಂದು ಹೇಳಿ ಏನೇ ಕಷ್ಟ ಬಂದರೂ ನನಗೆ ಇರಲಿ ಎಂದು ಮಕ್ಕಳಿಗೆಲ್ಲಾ ವಿದ್ಯಾಭ್ಯಾಸ ಮಾಡಿಸಲು ಹಗಲು-ರಾತ್ರಿ ಎನ್ನದೆ ದುಡಿದವರು ನನ್ನ ತಂದೆ. ನನ್ನ ತಂದೆಯನ್ನು ನೋಡಿ ಬೆಳೆದಿದ್ದರಿಂದಲೋ ಅಥವಾ ರಕ್ತಗತವಾಗಿಯೋ ಅಲ್ಲದೆ ಬಡತನದಿಂದ ಮುಂದೆ ಬರಬೇಕು ಎಂಬ ಛಲದಿಂದಲೋ ಏನೋ ನನಗೂ ದುಡಿಮೆಯ ಬದುಕು ನನ್ನ ಏಳನೇ ತರಗತಿಯಿಂದಲೇ ಶುರುವಾಯಿತು ಆದ್ದರಿಂದ ಸೋಮಾರಿ ಆಗಬೇಡಿ ಎಂದು ಹೇಳುವ ಅರ್ಹತೆ ನನಗಿದೆ ಎಂದು ಭಾವಿಸುತ್ತೇನೆ.

ನಮ್ಮ ಹೊಲದಲ್ಲಿ ಮೂರು ದೊಡ್ಡ ದೊಡ್ಡ ಕಲ್ಲಿನ ರಾಶಿ ಇದ್ದವು ಅದರಲ್ಲಿ ಒಂದು ಜಾಗದಲ್ಲಿ ಬೋಸೆ ದೇವರು ಉದ್ಭವಿಸಿತ್ತು ನಾವು ಅದನ್ನು ಬಹಳ ಕಾಲದಿಂದಲೂ ಪೂಜಿಸುತ್ತಿದ್ದೆವು ಮತ್ತು ಆ ದೇವರನ್ನು ನಾಯಕ ಜನಾಂಗದವರು ಅಪ್ಪನ ಬಳಿ ಈ ದೇವರು ನಮ್ಮ ಕುಲದೇವರು, ಮನೆದೇವರು ಎಂದು ಹೇಳಿ ಅದನ್ನು ತೆಗೆದುಕೊಂಡು ಹೋಗಿ ಬೋಸೆದೇವರಹಟ್ಟಿ ಯಲ್ಲಿ ಪ್ರತಿಷ್ಠಾಪಿಸಿದ್ದಾರೆ. ಆದರೆ ಅದೇ ಜಾಗದಲ್ಲಿ ಒಂದು ಕಲ್ಲಿನ ಮೂರ್ತಿ ಇಟ್ಟು ಬೋಸೆ ದೇವರು ಎಂದು ನಾವು ನಂಬಿ ಪೂಜೆ ಮಾಡುವ ಪದ್ಧತಿ ರೂಢಿಗತವಾಗಿದೆ. ಅಂತಹ ಕಲ್ಲುಗುಡ್ಡೆ ಕೆಳಗಡೆ ಒಂದು ದೊಡ್ಡ ಬಾವಿ ಇದೆಯೆಂದು ಅದರಲ್ಲಿ ಹೊನ್ನು ತುಂಬಿದ ಕೊಪ್ಪರಿಗೆಗಳು ಇವೆ ಮತ್ತು ಅದರ ಕಾವಲಿಗೆ ಒಂದು ಕೋಣ ಒಂದು ಕರಿನಾಗರ ಹಾವು ಮತ್ತು ಒಂದು ಓತಿಕ್ಯಾತ ಇದೆ ಎಂದು ಅದನ್ನು ತೆಗೆಯಲು ಬಹಳಷ್ಟು ಜನ ಪ್ರಯತ್ನಪಟ್ಟಿದ್ದಾರೆ ಎಂದು ನಮ್ಮ ತಂದೆ ತಾಯಿಯರು ಯಾವಾಗಲೂ ಹೇಳುತ್ತಿದ್ದರು ಅಲ್ಲದೆ ನನ್ನ ತಂದೆ ಬಳಿಬಂದು ಕೆಲವರು ಆ ಬಂಗಾರ ನಿಮಗೆ ಸಿಗಬೇಕಾದದ್ದು ಆದ್ದರಿಂದ ಅದನ್ನು ಪಡೆಯಲು ನಾವು ಎಷ್ಟೇ ಪ್ರಯತ್ನ ಪಟ್ಟರು ಆಗುತ್ತಿಲ್ಲ ಮತ್ತು ನಾವು ಕೋಣವನ್ನು ಸೋಲಿಸುತ್ತೇವೆ, ಕರಿ ನಾಗರಹಾವನ್ನು ಸೋಲಿಸುತ್ತೇವೆ ಆದರೆ ಆ ಓತಿಕ್ಯಾತ ವನ್ನು ಸೋಲಿಸಲು ನಮ್ಮಿಂದ ಆಗುತ್ತಿಲ್ಲ ಅಲ್ಲದೆ ಅದು ಒಮ್ಮೆ ಗೋಣಾಡಿಸಿದರೆ ನಮ್ಮ ಮಂತ್ರ-ತಂತ್ರವೆಲ್ಲಾ ಮುರಿದು ಬೀಳುತ್ತದೆ ಅದಕ್ಕಾಗಿ ನೀವು ನಮ್ಮ ಜೊತೆ ಇದ್ದರೆ ಅದರಲ್ಲಿ ಸಿಗುವ ನಿಧಿಯನ್ನು ಇಬ್ಬರು ಸಮಭಾಗವಾಗಿ ಹಂಚಿಕೊಳ್ಳೋಣ ಎಂದು ಪರಿಪರಿಯಾಗಿ ಒತ್ತಾಯ ಮಾಡಿದರು, ನಮ್ಮ ತಂದೆ ಅದಕ್ಕೆ ಒಪ್ಪುತ್ತಿರಲಿಲ್ಲ ಅಲ್ಲದೆ ಅವರಿಗೆ ಹೇಳುತ್ತಿದ್ದರು ನೀವು ಬೇಕಾದರೆ ನಮ್ಮ ಹೊಲದಲ್ಲಿ ಎಲ್ಲಿ ಬೇಕಾದರೂ ಅಗೆದು ಸಿಗುವ ಬಂಗಾರವನ್ನು ನೀವೇ ತೆಗೆದುಕೊಂಡು ಹೋಗಿ ಅದು ನನಗೆ ಬೇಡ ಆದರೆ ನಾನು ಮಾತ್ರ ಇಂತಹ ಕೆಲಸಕ್ಕೆ ನಿಮ್ಮ ಜೊತೆಗೆ ಬರುವುದಿಲ್ಲ ಎಂದು ಕಡ್ಡಿ ತುಂಡಾಗುವಂತೆ ಕಡಕ್ಕಾಗಿ ಹೇಳುತ್ತಿದ್ದರು. ಅವರು ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ಮರಳಿ ಹೋಗುತ್ತಿದ್ದರು.

ಒಮ್ಮೆ ನನ್ನ ತಾಯಿ ತಂದೆ ನನ್ನ ಸೋದರ ಮಾವನನ್ನು ನೋಡಲು ಸಂಡೂರಿಗೆ ಹೋಗಿದ್ದರಂತೆ ಆಗ ಅಲ್ಲಿ ಯಾರೋ ಅಪರಿಚಿತರು ನನ್ನ ತಂದೆಯನ್ನು ನೋಡಿ ನಮ್ಮ ಹೊಲದ ಬಗ್ಗೆ ಪರಿಚಯ ಅವರೇ ಹೇಳಿ ಮತ್ತು ಹೊಲದಲ್ಲಿ ಬೋಸೆ ದೇವರು ಉದ್ಭವಿಸಿದ್ದ ಕಲ್ಲು ರಾಶಿಯ ಕೆಳಗೆ ಒಂದು ಪುರಾತನ ಬಾವಿಯಿದ್ದು ಅದರಲ್ಲಿ ಬಂಗಾರ ತುಂಬಿದ ಕೊಪ್ಪರಿಗೆಗಳು ಇದ್ದಾವೆಂದು ಮತ್ತು ಅವು ನಿಮಗೆ ಸೇರಬೇಕಾದದ್ದು ಎಂದು ಹೇಳಿದ್ದರಂತೆ ಅದನ್ನು ನನ್ನ ತಂದೆ ತಾಯಿಯರು ಊರಿಗೆ ಬಂದ ಮೇಲೆ ಅಲ್ಲಿ ನಡೆದ ಘಟನೆಯನ್ನು ನಮಗೆ ತಿಳಿಸಿದ ನಂತರ ನಮಗೆಲ್ಲ ಆಶ್ಚರ್ಯವಾಯಿತು. ಏಕೆಂದರೆ ಈಗ ಸರಿಸುಮಾರು 40 ವರುಷದ ಹಿಂದೆ ಮತ್ತು ನಮ್ಮ ಹಳ್ಳಿಯಿಂದ 100 ಕಿಲೋಮೀಟರ್ಗಳು ದೂರ ಇರುವ ಸಂಡೂರಿನ ಅಪರಿಚಿತ ವ್ಯಕ್ತಿಗೆ ನಮ್ಮ ಹೊಲದಲ್ಲಿ ಇರುವ ಗುರುತು ಪರಿಚಯ ಅದೇಗೆ ತಿಳಿಯಿತೋ ಕಾಣೆ. ಇದನ್ನೆಲ್ಲಾ ಕೇಳಿದ ಬಳಿಕ, ನಾವು ತಂದೆಯ ಬಳಿ ಕೇಳಿದೆವು; ಅಪ್ಪ, ಹೇಗಿದ್ದರೂ ನಾವು ತುಂಬಾ ಬಡತನದಲ್ಲಿ ಇದ್ದೇವೆ ನಾವೇಕೆ ಅಂಥವರ ಜೊತೆ ಸೇರಿ ನಮ್ಮ ಜಮೀನಿನಲ್ಲಿ ಇರುವ ನಿಧಿಯನ್ನು ತೆಗೆದುಕೊಂಡು ನಾವು ಸಹ ಶ್ರೀಮಂತರಾಗಬಹುದು ಅಲ್ಲವೇ ಎಂದು ದುಂಬಾಲು ಬಿದ್ದೆವು. ಆದರೆ ನಮ್ಮ ತಂದೆ ಛೇ ಛೇ ಎಲ್ಲಾದರೂ ಉಂಟೆ ನಾನು ಏನು ಇಲ್ಲದಂತಹ ಸಮಯದಲ್ಲಿ ಕಷ್ಟಪಟ್ಟು ಹೊಲ ಮಾಡಿದ್ದೇನೆ ಮತ್ತು ನಿಮಗೆಲ್ಲ ಓದಿಸಿದ್ದೇನೆ ನೀವೇಕೆ ಅಂತಹ ಪುಗಸಟ್ಟೆ ಸಿಗುವ ಸಂಪತ್ತಿಗೋಸ್ಕರ ಆಸೆ ಪಡುತ್ತೀರಾ ಅದು ಒಳ್ಳೆಯದಲ್ಲ, ಏಕೆಂದರೆ, ಪುಗಸಟ್ಟೆ ಯಾಗಿ ಬಂದ ಯಾವುದೇ ಆಸ್ತಿಯಿಂದ ಯಾರು ಉದ್ಧಾರ ಆಗುವುದಿಲ್ಲ ಅಲ್ಲದೆ ಅದರಿಂದ ತೊಂದರೆಯೇ ಹೆಚ್ಚು ಎಂದು ಉಪದೇಶಿಸಿದ್ದಲ್ಲದೆ ನಿಮಗೆ ಓದಿಸಿದ್ದೇನೆ ಅದರಿಂದಲೇ ದುಡಿದು ತಿನ್ನಿ ಎಂದು ಹೇಳಿದರು.

ಇದನ್ನೆಲ್ಲಾ ನಮ್ಮ ತಲೆಯಿಂದ ತೆಗೆದು ಹಲವು ವರ್ಷಗಳೇ ಉರುಳಿದ್ದವು, ಒಮ್ಮೆ ನನ್ನ ತಂದೆ ಹೊಲದಲ್ಲಿ ಉಳುಮೆ ಮಾಡುವಾಗ ಒಂದು ದೊಡ್ಡ ಕಲ್ಲು ನೇಗಿಲಿಗೆ ಸಿಕ್ಕಿ ಮೇಲೆ ಬಂತಂತೆ ಅದನ್ನು ನನ್ನ ತಂದೆ ನೋಡಿ, ಇರಲಿ ಬಿಡು, ಉಳುಮೆ ಎಲ್ಲಾ ಆದ ಮೇಲೆ ಆ ಕಲ್ಲನ್ನು ಎತ್ತಿ ಬಿಸಾಕಿದರೆ ಆಯಿತು ಎಂದುಕೊಂಡು ಹಾಗೆ ಬೇಸಾಯ ಮಾಡುತ್ತಾ ಸಾಯಂಕಾಲ ಮರೆತು ಮನೆಗೆ ಹೋಗಿದ್ದಾರೆ.

ನನ್ನ ತಂದೆ ಮನೆಗೆ ಹೋದ ಬಳಿಕ ನಮ್ಮ ಊರಿನ ಗೊಲ್ಲರ ಜನಾಂಗದ ಒಬ್ಬರು ನಮ್ಮ ಹೊಲದಲ್ಲಿ ಹಾದುಹೋಗುವಾಗ ಆ ಬಂಡೆಯನ್ನು ನೋಡಿ ಇದೆಂಥಾ ದೊಡ್ಡ ಬಂಡೆ ಎದ್ದಿದೆ, ಹನುಮಣ್ಣ ಏಕೆ ಇಂತಹ ದೊಡ್ಡ ಬಂಡೆಯನ್ನು ಇಲ್ಲಿಯೇ ಬಿಟ್ಟಿದ್ದಾನೆ ಎಂದು ಬಂಡೆಯನ್ನು ಎತ್ತಲು ಅದರ ಕೆಳಗೆ ಒಂದು ಕೊಪ್ಪರಿಗೆ ಬಂಗಾರ ಸಿಕ್ಕಿತಂತೆ. ಆದರೆ, ಆತ ಅದನ್ನು ಅಲ್ಲಿಯೇ ಮಣ್ಣಿನಲ್ಲಿ ಮುಚ್ಚಿ ಕತ್ತಲಾದ ಮೇಲೆ ತೆಗೆದುಕೊಂಡು ಹೋಗೋಣ ಎಂದು ಮನೆಗೆ ಹೋಗಿ ಮನೆಯಿಂದ ಕಂಬಳಿಯನ್ನು ತಂದು ಕತ್ತಲಾದ ನಂತರ ನಿಧಿಯನ್ನು ಕಂಬಳಿಯಲ್ಲಿ ಮುಚ್ಚಿ ತೆಗೆದುಕೊಂಡು ಹೋದರಂತೆ ಮತ್ತು ಅದನ್ನು ತೆಗೆದುಕೊಂಡು ಹೋದನಂತರ ಅವರಿಗೆ ತುಂಬಾ ತೊಂದರೆಯಾಗಿ ಅವನತಿಗೆ ಕಾರಣವಾಯಿತಂತೆ ಇದು ನಮ್ಮ ಪರಿಗಣನೆಗೆ ಬಂದಿರಲಿಲ್ಲ. ಆದರೆ, ಅವರೇ ಹೀಗಾಯ್ತು ಎಂದು ಹೇಳಿದಾಗಲೇ ನಮಗೆ ಗೊತ್ತಾಗಿದ್ದು. ಆಗ ಗೊತ್ತಾಯ್ತು ನಮ್ಮ ತಂದೆ ಹೇಳಿದ್ದು ನಿಜ ಪುಗಸಟ್ಟೆಯಾಗಿ ಸಿಗುವ ಫಲದಿಂದ ಯಾವುದೇ ಊರ್ಜಿತ ವಾಗುವುದಿಲ್ಲ ಎಂದು.

ಅದಕ್ಕೆ ಹೇಳುವುದು ಏನಾದರೂ ಸಾಧಿಸಬೇಕೆಂದರೆ ತಮ್ಮ ತೋಳ್ಬಲ ನಂಬಿ ಪರಿಶ್ರಮದಿಂದ ಸಾಧಿಸಬೇಕು. ಏಕೆಂದರೆ, "ಸಾಧನೆ ಎಂಬುದು ಸಾಧಿಸುವ ಸಾಧಕನ ಸ್ವತ್ತೇ ಹೊರತು ಸೋಮಾರಿಗಳ ಸ್ವತ್ತಲ್ಲ" ಎಂದು. ಹಿಂದೆ ಅಂಗವಿಕಲತೆಯಿಂದಲೋ ಅಥವಾ ಇನ್ನ್ಯಾವುದೋ ಒಂದು ಪ್ರಬಲ ಕಾರಣಗಳಿಂದಲೋ ಇನ್ನೊಬ್ಬರ ದುಡಿಮೆಯಲ್ಲಿ ಅವಲಂಬಿತವಾಗಿರುವುದು ಅನಿವಾರ್ಯವಾಗಿತ್ತು ಆದರೆ ಈಗ ಅವಲಂಬಿತವಾಗಿರುವುದು ತಮ್ಮ ಅಧಿಕಾರ ವೆಂಬಂತೆ ವರ್ತಿಸುತ್ತಾರೆ ಕೆಲವರು.

ಹಾಸ್ಯಬ್ರಹ್ಮ ಬೀಚಿಯವರು ಸೋಮಾರಿಗಳಿಗೆ ತೀಕ್ಷಣವಾಗಿಯೇ ಹೇಳಿದ್ದಾರೆ "ಬಡವನಾಗಿ ಹುಟ್ಟುವುದು ತಪ್ಪಲ್ಲ ಬಡವನಾಗಿ ಸಾಯುವುದು ತಪ್ಪೆಂದು". ಅದಕ್ಕೆ ನಾನು ಹೇಳುವುದು ಏನೆಂದರೆ "ಸಿರಿವಂತನಾಗದಿದ್ದರೂ ಸೋಮಾರಿಯಾಗಬೇಡ

ಧನ್ಯವಾದಗಳು

SI/M Venkatesha H
O/O The IGP, Karnataka Kerala Sector,
CRPF Campus, Yelahanka, Bengaluru,
Karnataka-560064
M/No. 7760023887
9742933400

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T